ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಅಧ್ಯಕ್ಷತೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಕಾಂಟಿನ್‌ನಲ್ಲಿ ಹಳಸು ಇಡ್ಲಿ ಕೊಡುತ್ತಾರೆ, ಅದು ವಾಸನೆ ಬರುತ್ತಾ ಇದೆ, ಆದುದರಿಂದ ಈ ವಿಚಾರವನ್ನು ಪಿ. ಡಬ್ಲ್ಯೂ. ಡಿ. ಮಿನಿಸ್ಟರ್‌ಗೆ ಹೇಳಿ ಉತ್ತಮ ಸಪ್ಲೈ ಮಾಡಿಸುತ್ತೀರಾ ?

MADAM SPEAKER.—I shall tell the Public Works Minister.

Now the Minister for Education will have to reply to the discussion on the Demand.

Budget Estimates for 1973-74 N.P.Demands for Grants :

demand Nos : 17, 73 and 17A (Debate Continued)

† ಶ್ರೀ ಎ ಆರ್. ಬದರಿನಾರಾಯಣ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷಿಣಿಯವರೇ, ಈ ವಿದ್ಯಾಖಾತೆಯ ಪ್ರಗತಿ ಬಗ್ಗೆ ಮೇಲಿನ ಮನೆಯಲ್ಲಿ ಎರಡೂವರೆ ದಿವಸ, ಈ ಮನೆಯಲ್ಲಿ ಎರಡು ದಿವಸ ಬಹಳ ವಿಪುಲವಾಗಿ ಚರ್ಚೆಯಾಗಿ ಅನೇಕ ಮಾನ್ಯ ಸದಸ್ಯರುಗಳು ಈ ಸಭೆಯಲ್ಲಿ ನಾನಾ ದೃಷ್ಟಿಕೋಣಗಳಿಂದ ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರಲ್ಲಿ ಸರ್ಕಾರಕ್ಕೆ ಒಂದು ಒಳ್ಳೆಯ ಅವಕಾಶ ಸಿಕ್ಕಿದೆ. ಏನು ಎಂದು ಹೇಳಿದರೆ ಈ ವಿದ್ಯಾ ಖಾತೆ ಹೇಗೆ ನಡೆಯುತ್ತಾ ಇದೆ, ಹೇಗೆ ನಡೆಯಬೇಕು ಇದರ ಬಗ್ಗೆ ಸಲಹೆಗಳು ಏನು ಎನ್ನತಕ್ಕಂಥಾ ಒಂದು ಸಿಂಹಾವಲೋಕನ ಮಾಡತಕ್ಕಂಥ ಅವಕಾಶ ಈಗ ದೊರೆತಿದೆ. ಈ ಒಂದು ಮನೆಯಲ್ಲಿ ನಡೆದಂಥ ಚರ್ಚೆಯಲ್ಲಿ ಒಂದು ಸಂತೋಷದ ವಿಚಾರ ಏನು ಎಂದು ಹೇಳಿದರೆ ಯಾವ ವಿಕೋಪಗಳಿಗೂ ಅವಕಾಶ ಕೊಡದಂತೆ ರಚನಾತ್ಮಕವಾದಂಥ ಟೀಕೆಗಳನ್ನು ಮಾನ್ಯ ಸದಸ್ಯರುಗಳು, ವಿರೋಧ ಪಕ್ಷದವರು ಮತ್ತು ನಮ್ಮ ಪಕ್ಷದವರೂ ಕೂಡ ಉನ್ನತ ಮಟ್ಟದಲ್ಲಿ ಬಹಳ ಒಳ್ಳೆಯ ಸಲಹೆಗಳನ್ನೂ ಮಾಡಿದ್ದಾರೆ. ಮತ್ತು ನಮ್ಮ ಅನೇಕ ಅಧಿಕಾರಿಗಳೆಲ್ಲರೂ ಕೂಡ ಬಂದಿದ್ದಾರೆ. ಅವರಿಗೂ ಕೂಡ ಪ್ರಜಾಪ್ರತಿನಿಧಿಗಳ ಮನದೊಳಗೆ ಅಭಿಪ್ರಾಯ ಹೇಗೆ ಇದೆ; ಪ್ರಜಾಪ್ರಭುತ್ವದಲ್ಲಿ ಜನಗಳ ಆಶೋತ್ತರಗಳು ಏನು ; ಈ ವಿದ್ಯಾ ಖಾತೆಯಲ್ಲಿ ಏನು ಪ್ರಗತಿಯನ್ನು ಸಾಧಿಸಬೇಕು ಎನ್ನತಕ್ಕಂಥ ವಿಚಾರವನ್ನು ತಿಳಿದುಕೊಳ್ಳತಕ್ಕಂಥ ಅವಕಾಶ ಮಾನ್ಯ ಸದಸ್ಯರಿಂದ ಉಂಟಾಗಿದೆ. ಆದಕ್ಕಾಗಿ ಮಾನ್ಯ ಸದಸ್ಯರುಗಳಿಗೆ ನಾನು ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಇನ್ನು ಸರ್ಕಾರ ಈ ವಿದ್ಯಾ ಖಾತೆಯಲ್ಲಿ ಏನು ಮಾಡಿದೆ, ಏನು ಮಾಡಿಲ್ಲ, ಏನು ಮಾಡಬೇಕು, ಏತಕ್ಕೆ ಮಾಡಿಲ್ಲ ಎನ್ನತಕ್ಕಂಥ ವಿಚಾರವನ್ನು ಪೂರ್ತಿ ಮಾಡಬೇಕಾಗಿದ್ದರೆ ವಿದ್ಯಾ ಇಲಾಖೆಯು ಆಸ್ತಿತ್ವದಲ್ಲಿ ಇಂದಿನ ಪರಿಸ್ಥಿತಿಯಲ್ಲಿ ವಿದ್ಯಾ ಇಲಾಖೆ ಹೇಗಿದೆ ಎನ್ನತಕ್ಕಂಥಾದನ್ನು ಸ್ವಲ್ಪ ಹೇಳಬೇಕು ಎಂದು ಹೇಳುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ.

ಈ ವಿದ್ಯಾ ಖಾತೆ 25 ವರ್ಷಗಳ ಕಾಲದಿಂದ ಒಂದು ನಗಣ್ಯ ಪ್ರಮಾಣದಲ್ಲಿ ಇದ್ದುದು ಈಗೊತ್ತು ಒಂದು ಬೃಹತ್ ಪ್ರಮಾಣವಾಗಿ ಬೆಳೆದು ಬಂದಿದೆ. ಇದು 13-14 ಡಿಪಾರ್ಟ್‌ಮೆಂಟ್‌ಗಳಿಂದ ಕೂಡಿದ ಖಾತೆ. ಆದಕ್ಕಾಗಿ ಈ ವರ್ಷ 68—70 ಕೋಟಿ ರೂಪಾಯಿಗಳ ಸರ್ಕಾರದ ಹಣವನ್ನು ಮೀಸಲಾಗಿಟ್ಟಿದೆ. ಒಂದು ವಿಷಯ ಮಾತ್ರ ಮಾನ್ಯ ಸದಸ್ಯರಿಗೆ ಹೇಳಲು ಅಪೇಕ್ಷೆ ಪಡುತ್ತೇನೆ. ಈ ಸರ್ಕಾರ ಬಂದು ಈಗ್ಗೆ ಒಂದು ವರ್ಷವಾಗಿದೆ. ಈ ವರ್ಷದಲ್ಲಿ ಒಂದು ಪ್ರಗತಿದಾಯಕವಾದಂಥಾದ್ದು ಏನು ಎಂದರೆ Education is an instrument of Social and Economic and Political change ಎನ್ನತಕ್ಕಗಥಾದ್ದು.

ಇದು ಇಂತಹ ಒಂದು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯದ ಬೆಳವಣಿಗೆಗೆ ಸಾಧನವಾಗಿರತಕ್ಕಂಥ ಈ ವಿದ್ಯಾ ಇಲಾಖೆ ಈ ದೇಶದಲ್ಲಿ ಏನು ಸಾಧನೆ ಮಾಡಿದೆ ಅದು ಇನ್ನೂ ಹೆಚ್ಚಾಗಿ ಕಣ್ಣಿಗೆ ಕಾಣತಕ್ಕಂಥ ರೀತಿಯಲ್ಲಿ ಸಾಧನೆಯನ್ನು ಮಾಡಲಿಲ್ಲ, ಎನ್ನತಕ್ಕಂಥ ವಿಚಾರವನ್ನು ನನ್ನ ಯುವಕ ಸ್ನೇಹಿತರಾದಂಥ ನಮ್ಮ ಜಿಲ್ಲೆಯವರಾದಂಥ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಬಹಳ ಕಳಕಳಿಯಿಂದ ಈ ಮಾತನ್ನು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಇದು ವಿದ್ಯಾಭ್ಯಾಸದ ಮಟ್ಟದಲ್ಲಿ ನಡೆಯಬೇಕು, ಇದರಿಂದ ದೇಶಕ್ಕೆ ಕಲ್ಯಾಣ

† Indicates the that remarks or speeches have not been revised by the member concerned.

(ಶ್ರೀ ಎ. ಆರ್. ಬದರೀನಾರಾಯಣ)

ವಾಗಬೇಕು ಎನ್ನುತಕ್ಕಂಥಾದ್ದನ್ನು ನಾನೂ ಕೂಡ ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ನಾನು ಹೇಳಿದ ಹಾಗೆ ಈ ವಿದ್ಯಾ ಖಾತೆಯಲ್ಲಿ ಅನೇಕ ಬೃಹತ್ ಸಮಸ್ಯೆಗಳು ಇವೆ. ಅನೇಕ ರಾಜ್ಯಗಳಿಂದ ಬಂದಂಥ ಅನೇಕ ರೀತಿಯಾದಂಥ ಕಾನೂನುಗಳು, ಅನೇಕ ರೀತಿಯಾದಂಥ ಸಮಸ್ಯೆಗಳು ಇವೆಲ್ಲವೂ ಕೂಡ, ಇನ್ನೂ ಕೂಡ ಸರಿಯಾಗಿ ಮಾಡಲಿಕ್ಕೆ ಆಗಲಿಲ್ಲ. ಇದು ಇನ್ನು ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡಬೇಕಾಗಿದೆ. ನಾವು ಅವುಗಳಿಗೆ ಕಟ್ಟಡಗಳನ್ನು ಕಟ್ಟಿಸಿಕೊಡಬೇಕು, ಹೆಚ್ಚಿನ ಉಪಾಧ್ಯಾಯರನ್ನು ಕೊಡಬೇಕು, ಹೆಚ್ಚಿನ ಪಿಠೋಪಕರಣಗಳನ್ನು ಮತ್ತು ಪೀಠೋಪಕರಣಗಳನ್ನು ಒದಗಿಸಬೇಕು. ಈ ರೀತಿಯಲ್ಲಿ ವಿಧ್ಯಾಭ್ಯಾಸದ ಮಟ್ಟವನ್ನು ಏರಿಸಬೇಕು ಎಂದು ಪ್ರಯತ್ನ ಮಾಡಿದಾಗ ಅದೇ ರೀತಿ ವಿದ್ಯಾರ್ಥಿಗಳ ನೈತಿಕ ಮಟ್ಟವನ್ನೂ ಕೂಡ ಏರಿಸಬೇಕಾಗುತ್ತದೆ. ಹುಡುಗರ ಅನೇಕ ಸಮಸ್ಯೆಗಳನ್ನು ಪರಿಹರಿಸಬೇಕು ಎನ್ನುತಕ್ಕಂಥಾದ್ದು ಕೂಡ ಇದೆ. ಹೀಗೆಯೇ ಇನ್ನೂ ಬೇಕಾದಷ್ಟು ಸಮಸ್ಯೆಗಳು ಇವೆ. ಇವೆಲ್ಲವನ್ನೂ ಪರಿಹರಿಸಬೇಕು ಎನ್ನುವುದನ್ನು ಯೋಚನೆ ಮಾಡಿದಾಗ ಹಣಕಾಸಿನ ಪರಿಸ್ಥಿತಿಯನ್ನೂ ನೋಡಿಕೊಳ್ಳಬೇಕಾಗುತ್ತದೆ. ಹಣಕಾಸಿನ ಮಂತ್ರಿಗಳು ಈ ಖಾತೆಗೆ ಮೈಸೂರು ರಾಜ್ಯದ ವರಮಾನದಲ್ಲಿ ನಾಲ್ಕನೇ ಒಂದು ಭಾಗ ಹಣವನ್ನು ಕೊಟ್ಟಿದ್ದಾರೆ. ಇಷ್ಟಾದರೂ ಕೂಡ ಈ ಬೃಹದಾಕಾರವಾದ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಹಣ ಮತ್ತು ಸಿಬ್ಬಂದಿ ಎಷ್ಟು ಬೇಕೋ ಅಷ್ಟು ಸಿಕ್ಕುವುದು ಇಂದಿನ ಪರಿಸ್ಥಿತಿಯಲ್ಲಿ ದುರ್ಲಭವಾಗಿರುವಂಥ ಪರಿಸ್ಥಿತಿ ಇದೆ. ಈ ಖಾತೆಯಲ್ಲಿ ಮಾಡಬೇಕಾದ ಕೆಲಸಗಳು ಬಹಳ ಇವೆ ಎನ್ನುವುದನ್ನು ಒಪ್ಪುತ್ತೇನೆ. ಆದರೆ ಒಂದು ಸಮಾಧಾನವಾದ, ಸಂತೋಷಕರವಾದ ತೃಪ್ತಿ ಎಂದರೆ ಹಳ್ಳಿಯವರಿಗೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು, ಹಳ್ಳಿಗಳಲ್ಲಿ ಶಾಲೆಗಳು ಜಾಸ್ತಿಯಾಗಬೇಕು, ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಕಾಲೇಜುಗಳಾಗಬೇಕು, ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಕರ್ಯಗಳನ್ನು ಕೊಡಬೇಕು, ತಮ್ಮ ಮಕ್ಕಳೂ ವಿದ್ಯಾವಂತರಾಗಬೇಕು ಎನ್ನತಕ್ಕ ಆಸೆಯನ್ನು ವ್ಯಕ್ತಪಡಿಸತಕ್ಕ ವಿಶೇಷವಾದ ಒತ್ತಾಯ ಮತ್ತು ಒತ್ತಡ ಸರ್ಕಾರದ ಮೇಲೆ ಬರುತ್ತಿರುವುದು ಸಂತೋಷದ ಸಮಾಚಾರ. ಅದನ್ನು ಕೂಡ ನಾವು ಈಗ ಎದುರಿಸಬೇಕಾಗಿದೆ. ಇಷ್ಟು ದೊಡ್ಡ ಸಮಸ್ಯೆಗಳು ನಮ್ಮ ಮುಂದೆ ಇವೆ.

ವಿದ್ಯಾ ಖಾತೆಯಲ್ಲಿ 1955—56ರಲ್ಲಿ 22,250 ಪ್ರಾಥಮಿಕ ಶಾಲೆಗಳು ಇದ್ದದ್ದು ಈ ಹೊತ್ತು 32,692 ಪ್ರಾಥಮಿಕ ಶಾಲೆಗಳು ಮೈಸೂರು ರಾಜ್ಯದಲ್ಲವೆ. ಶಾಲೆಗಳಲ್ಲಿ ಮಕ್ಕಳ ದಾಖಲಾತಿಯನ್ನು ತೆಗೆದುಕೊಂಡರೆ 1955—56ರಲ್ಲಿ 18.85 ಲಕ್ಷ ಇದ್ದದ್ದು ಈ ಹೊತ್ತು 39.25 ಲಕ್ಷ ಆಗಿದೆ. ಎಂದರೆ ದಾಖಲಾತಿ ಸಂಖ್ಯೆ ಒಂದಕ್ಕೆ ಎರಡರಷ್ಟು ಆಗಿದೆ. ಟೀಚರ್ ಪ್ಯೂಪಿಲ್ ರೇಷಿಯೋ 40 ಹುಡುಗರಿಗೆ ಒಬ್ಬ ಉಪಾಧ್ಯಾಯರಿರಬೇಕು ಎನ್ನುವ ದೃಷ್ಟಿಯಿಂದ 58,204 ಜನ ಉಪಾಧ್ಯಾಯರು ಹಿಂದೆ ಇದ್ದು ಈಗ 97,612 ಜನ ಶಿಕ್ಷಕರಿದ್ದಾರೆ. ಟ್ರೇನಿಂಗ್ ಪಡೆದವರ ಸಂಖ್ಯೆ 48 ಪರ್ಸೆಂಟ್ ಇದ್ದುದು ಈ ಹೊತ್ತು 81.4 ಪರ್ಸೆಂಟ್ ಆಗಿದೆ. ಹೈಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆ 1.17 ಲಕ್ಷವಿದ್ದುದು ಈಗ 4.84 ಲಕ್ಷಕ್ಕೆ ಏರಿದೆ. ಹಿಂದೆ 486 ಪ್ರೌಢ ಶಾಲೆಗಳಿದ್ದು ಈಗ 2060 ಪ್ರೌಢಶಾಲೆಗಳಿವೆ. ಶಿಕ್ಷಕರ ಸಂಖ್ಯೆ 7272 ಇದ್ದುದು ಈ ಹೊತ್ತು 22,185 ಆಗಿದೆ. ಹಿಂದಿನ ಮೂರು ವರ್ಷಗಳಲ್ಲಿ 9 ಸರ್ಕಾರಿ ಹೈನ್ಯೂಲುಗಳನ್ನು ಮಂಜೂರು ಮಾಡಿದ್ದರು. ಈ ವರ್ಷ 14 ಸರ್ಕಾರಿ ಹೈನ್ಯೂಲುಗಳನ್ನು ಮಂಜೂರು ಮಾಡಿದ್ದೇವೆ. ಯಾವ ಕಾಲದಲ್ಲಿಯೂ ಇಲ್ಲದೆ ಇದ್ದಷ್ಟು ಮಂಜೂರು ಮಾಡಿದ್ದೇವೆ.

60.4 ಪರ್ಸೆಂಟ್ ಟ್ರೇನ್ಡ್ ಟೀಚರ್ಸ್ ಹಿಂದೆ ಇದ್ದರು, ಈ ಹೊತ್ತು 67 ಪರ್ಸೆಂಟ್ ಟ್ರೇನ್ಡ್ ಟೀಚರ್ಸ್ ಇದ್ದಾರೆ. ಭಾಷಾ ಪಂಡಿತರಿಗೆ ಬಿ. ಎಡ್. ಗೆ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. 70 ಜನರನ್ನು ಟ್ರೇನಿಂಗಿಗೆ ಹಿಂದೆ ಕಳುಹಿಸಿದ್ದರು. ಈ ವರ್ಷ 530 ಜನರನ್ನು ಕಳುಹಿಸಿದ್ದೇವೆ. ಅಕಾಡೆಮಿಕ್ ಸ್ಟ್ಯಾಂಡರ್ಡ್ಸ್ ಅದಷ್ಟುಮಟ್ಟಿಗೆ ಉತ್ತಮ ಮಾಡಬೇಕೆನ್ನುವ ದೃಷ್ಟಿಯಿಂದ ಶಿಕ್ಷಕರಿಗೆ ಟ್ರೇನಿಂಗ್ ಕೊಡುವುದಕ್ಕೆ, ಪದವೀಧರರನ್ನು ಪ್ರಾಥಮಿಕ ಶಾಲೆಗಳಲ್ಲಿ ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಕ್ವಾಲಿಟಿ ಆಫ್ ಎಜುಕೇಷನ್ ಉತ್ತಮಪಡಿಸಬೇಕೆನ್ನುವ ದೃಷ್ಟಿಯಿಂದ ಹಿಂದಿನ ಮೂರು ವರ್ಷಗಳಲ್ಲಿ ಒಂದು ಸಾವಿರ ಗ್ರಾಜುಯೇಟ್ ಹೆಡ್ ಮಾಸ್ಟರುಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ನೇಮಕ ಮಾಡಿದ್ದರು. 1972-73, ಒಂದೇ ವರ್ಷ

ದಲ್ಲಿ 750 ಗ್ರಾಜುಯೇಟ್ ಹೆಡ್‌ಮಾಸ್ಟರುಗಳನ್ನು ನೇಮಕ ಮಾಡಿದ್ದೇವೆ. ಇಂದಿನ ಆಧುನಿಕ ಪ್ರಪಂಚದಲ್ಲಿ ಪ್ರೈಮ್ಯಾನಿಕ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕೆಂಬ ದೃಷ್ಟಿಯಿಂದ ಯೂನಿಸೆಫ್‌ನಿಂದ ಬರತಕ್ಕ ಸಹಾಯದಿಂದ ಹಿಂದಿನ ವರ್ಷ 80 ಶಾಲೆಗಳಲ್ಲಿ ಮಾಡುತ್ತಿದ್ದರು. ಈ ವರ್ಷ 2100 ಶಾಲೆಗಳಲ್ಲಿ ಈ ವಿಜ್ಞಾನ ಶಿಕ್ಷಣವನ್ನು ಕೊಡುವ ಹಾಗೆ ಏರ್ಪಾಡು ಮಾಡಿದ್ದೇವೆ. ಕ್ವಾಲಿಟಿ ಆಫ್ ಎಜುಕೇಷನ್ ಉತ್ತಮವಾಗಬೇಕು ಎಂದು 'ಎನ್‌ರಿಚ್ಡ್ ಕರಿಕುಲಂ' ಎಂದರೆ ಈಗ ಇರುವ ಕರಿಕುಲಂ ಉತ್ತಮಗೊಳಿಸುವುದು, ಪಠ್ಯ ಪುಸ್ತಕಗಳನ್ನು ಕಡಮೆ ಬೆಲೆಗೆ ಕೊಡುವುದು ಇಂಥ ಪ್ರಯತ್ನಗಳನ್ನು ಮಾಡಿದ್ದೇವೆ. ಕನ್ನಡ ಒಂದು ಮತ್ತು ಎರಡನೆ ಪುಸ್ತಕಗಳಿಗೆ ಅಂದವಾಗಿರುವ ಬಣ್ಣಗಳನ್ನು ಉಪಯೋಗಿಸಿ ಮಕ್ಕಳಿಗೆ ಆಕರ್ಷಕವಾಗಿರುವ ರೀತಿಯಲ್ಲಿ ಮಾಡಿ 90 ಪೈಸೆ ಇದ್ದ ಪುಸ್ತಕವನ್ನು 75 ಪೈಸೆಗೂ, 65 ಪೈಸೆ ಇದ್ದ ಪುಸ್ತಕವನ್ನು 50 ಪೈಸೆಗೂ ಮಾರುವುದಕ್ಕೆ ಅವಕಾಶ ಮಾಡಿರುವುದಲ್ಲದೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಜನಾಂಗದ ಮಕ್ಕಳಿಗೆ ಈ ಎರಡೂ ಪುಸ್ತಕಗಳನ್ನು ಉಚಿತವಾಗಿ, ಏನೊಂದು ಹಣವನ್ನೂ ತೆಗೆದುಕೊಳ್ಳದೆ ಕೊಡತಕ್ಕ ವ್ಯವಸ್ಥೆಯನ್ನು ಕೂಡ ಸರ್ಕಾರ ಮಾಡಿದೆ. ಚೀಪರ್ ಟೆಕ್ಸ್ಟ್ ಬುಕ್, ಒದಗಿಸುವುದು ಗ್ರಾಜುಯೇಟ್ ಹೆಡ್‌ಮಾಸ್ಟರ್ ನೇಮಕ ಮಾಡುವುದು, ಶಿಕ್ಷಕರಿಗೆ ಹೆಚ್ಚು ಹೆಚ್ಚಾಗಿ ಟ್ರೇನಿಂಗ್ ಕೊಡುವುದು—ಮೊದಲು ಒಂದೇ ವರ್ಷ ಟ್ರೇನಿಂಗ್ ಇದ್ದುದನ್ನು ಎರಡು ವರ್ಷ ಟ್ರೇನಿಂಗ್ ಕೊಡುವ ವ್ಯವಸ್ಥೆ ಮಾಡಿರುವುದು, ಶಾಲಾ ಅಭಿವೃದ್ಧಿ ಸಮಿತಿಗಳನ್ನು ಮಾಡಿ, ಆಯಾ ಶಾಲೆಗಳಿಗೆ ಬೇಕಾದ ಪೀಠೋಪಕರಣಗಳು ಮತ್ತು ಪಾಠೋಪಕರಣಗಳು, ಲೈಬ್ರರಿ, ಹೀಗೆ ಏನು ಬೇಕೋ ಅದೆಲ್ಲವನ್ನೂ ಅವರ ಸಹಕಾರ ಪಡೆದು ಅದನ್ನು ಉತ್ತಮಗೊಳಿಸಬೇಕು ಎಂದು ವಿದ್ಯಾಭ್ಯಾಸದ ಗುಣಮಟ್ಟವನ್ನು ಉತ್ತಮಪಡಿಸಬೇಕೆಂಬ ದೃಷ್ಟಿಯಿಂದ ಇವೆಲ್ಲವನ್ನೂ ಮಾಡಿದ್ದೇವೆ. ಆದರೆ ಸರ್ಕಾರಕ್ಕೆ ಇರತಕ್ಕ ಸಮಸ್ಯೆ ಏನೆಂದರೆ ಹತ್ತಿರ ಹತ್ತಿರ ಒಂದು ಲಕ್ಷ ಉಪಾಧ್ಯಾಯರು ಪ್ರಾಥಮಿಕ ಶಾಲೆಗಳಲ್ಲಿದ್ದಾರೆ, ಸೆಕೆಂಡರಿ ಶಾಲೆಗಳಲ್ಲಿ 23 ಸಾವಿರ ಶಿಕ್ಷಕರಿದ್ದಾರೆ, ಸೂಪರ್‌ವೈಸರಿ ಸ್ಟಾಫ್ 1200 ಜನರಿದ್ದಾರೆ, ಕಾಲೇಜುಗಳಲ್ಲಿ 25 ಸಾವಿರ ಅಧ್ಯಾಪಕರಿದ್ದಾರೆ. ಒಟ್ಟು ಒಂದು ಲಕ್ಷ 50 ಸಾವಿರ ನೌಕರರು ಶಿಕ್ಷಕರು ವಿದ್ಯಾ ಖಾತೆಯಲ್ಲಿದ್ದಾರೆ. ರಾಜ್ಯದ ನೌಕರ ವರ್ಗದಲ್ಲಿ ಅರ್ಧ ಭಾಗ ನಮ್ಮ ವಿದ್ಯಾ ಇಲಾಖೆಗೆ ಸೇರಿದೆ. ಆದರಲ್ಲಿ ನಮಗೆ ಇರತಕ್ಕ ಸಮಸ್ಯೆಗಳೆಂದರೆ ಟ್ರಾನ್ಸ್‌ಫರ್ಸ್ ವಿಚಾರ. ಇದು ಬಹಳ ವಾದ ವಿವಾದದ ವಿಚಾರ. ಬಹಳ ಜನ ಹೇಳುತ್ತಾರೆ, ಶಾಸಕರು ಹೇಳುತ್ತಾರೆ ಹಳ್ಳಿಗಳಿಗೆ ಪ್ರವಾಸ ಹೋದಾಗ ಅಲ್ಲಿರುವ ಜನಗಳು ಹೇಳುತ್ತಾರೆ, ಉಪಾಧ್ಯಾಯರನ್ನು ಒಂದೇ ಕಡೆ ಇಟ್ಟಿರಬಾರದು, ಬದಲಾವಣೆ ಮಾಡುತ್ತಿರಬೇಕು, ಆವರು ಒಂದೇ ಕಡೆ ಇದ್ದರೆ ವೆಸ್ಟೆಡ್ ಇಂಟರೆಸ್ಟ್ ಮಾಡಿಕೊಂಡು, ಜಮೀನು ಮಾಡಿಕೊಂಡು, ಲೇವಾದೇವಿ ಮಾಡಿಕೊಂಡು, ಒಂದು ಮಿಲ್ ಹಾಕಿಕೊಂಡು ರಾಜಕೀಯದಲ್ಲಿಯೂ ಪ್ರವೇಶ ಮಾಡಿರುತ್ತಾರೆ ಮತ್ತು ಶಿಕ್ಷಕರ ಕೆಲಸ ಏನಿರುತ್ತದೆಯೋ ಅದನ್ನು ಮಾಡದೆ ಬೇರೆ ಕೆಲಸ ಮಾಡುತ್ತಾರೆ, ಅವರನ್ನು ವರ್ಗಾವಣೆ ಮಾಡಬೇಕು ಎಂದು ಹೇಳುವಂಥ ಕೂಗು ಜನರಿಂದ ಇದೆ. ಶಾಸಕರಿಂದ ಕೂಡ ಇದೆ. ಆದರೆ ನಮ್ಮನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಬೇಡಿ, ನಮ್ಮ ಊರಿನಲ್ಲಿಯೇ ನಮ್ಮನ್ನು ಇಡಿ ಎಂದು ಶಿಕ್ಷಕರಾದವರು ಹೇಳುತ್ತಿದ್ದಾರೆ. ಎಲ್ಲ ಸರ್ಕಾರಿ ನೌಕರರನ್ನು ಯಾವರೀತಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡುತ್ತೇವೆಯೋ ಅದೇ ರೀತಿ ಇವರೂ ಕೂಡ ಸರ್ಕಾರಿ ನೌಕರರಾದುದರಿಂದ ಇವರನ್ನೂ ವರ್ಗ ಮಾಡಬೇಕು. ಅದರೆ ಇರುವ ಒಂದು ತೊಂದರೆ ಎಂದರೆ ಅವರು ಹಳ್ಳಿಗಳಿಗೆ ಹೋದರೆ ವಸತಿ ಗೃಹಗಳಿಲ್ಲ. ಈ ಒಂದು ಅಸೌಕರ್ಯವಿದೆ. ಅದನ್ನು ಸರಿ ಮಾಡಬೇಕು. ಹೇಗೆ ಸರಿ ಮಾಡಬೇಕು ಎನ್ನುವ ದಿಸೆಯಲ್ಲಿ ಸರ್ಕಾರ ಕೂಡ ಬಹಳ ಯೋಚನೆ ಮಾಡುತ್ತಿದೆ.

9-30 A. M.

ಇನ್ನು ಡಿಪಾರ್ಟ್‌ಮೆಂಟ್ ಆಫ್ ರೀ ಆರ್ಗನೈಜೇಷನ್ ಬಗ್ಗೆ ಹೇಳುವಾಗ ಟ್ರಾನ್ಸ್‌ಫರುಗಳ ಬಗ್ಗೆ ಸರಕಾರಕ್ಕೆ ಒತ್ತಡಗಳು ಬರುತ್ತವೆ. ಶೇಕಡಾ ಹತ್ತರಷ್ಟು ಟೀಚರುಗಳ ವರ್ಗದ ಬಗ್ಗೆ ಮನವಿಗಳು ಬರುತ್ತವೆ, ಇನ್ನೊಂದು ಇದರಲ್ಲಿ ಹೈ ರಾರ್ಕ್ ಆಫ್ ಸರ್ವಿಸ್ ಬರುತ್ತದೆ. ಇದರಲ್ಲಿ ಉಪಾಧ್ಯಾಯರುಗಳು ಆಗಿ ಕೆಲಸ ಮಾಡುತ್ತಿರುವರೂ ಅವರು ಹೋದ ಕಡೆಗಳಲ್ಲಿ ಬಹಳ ಪ್ರಬಲರಾಗಿರುತ್ತಾರೆ. ಇಂತಹ ವ್ಯಕ್ತಿಗಳನ್ನು ವರ್ಗ ಮಾಡಬೇಕೆಂದರೆ ಅವರನ್ನು ಮಾಡಕೂಡದು ಎನ್ನುವ ಒತ್ತಡಗಳೂ ಸರಕಾರಕ್ಕೆ ಬರುತ್ತವೆ. ಟ್ರಾನ್ಸ್‌ಫರುಗಳು ಹೇಗೆ ಮಾಡಬೇಕು ಎನ್ನುವುದೇ ಒಂದು ಕಷ್ಟವಾಗಿದೆ. ಇದರಲ್ಲಿ ವರ್ಗ ಮಾಡಿದರೆ ಅಂತಹವರಿಗೆ ವಸತಿ ಸೌಕರ್ಯ ಮೊದಲು ಕೊಡಬೇಕು. ಮತ್ತು ಕೆಲವು ಕಡೆಗಳಲ್ಲಿರುವ ಟೀಚರುಗಳಲ್ಲಿ ಗಂಡ ಹೆಂಡತಿ ಇರುತ್ತಾರೆ. ಇವ

(ಶ್ರೀ ಎ. ಆರ್. ಬದರಿನಾರಾಯಣ)

ರನ್ನು ಒಂದೇ ಕಡೆ ಇರುವಂತೆ ಮಾಡಬೇಕಾಗುತ್ತದೆ, ಹೆಣ್ಣು ಕ್ಯಾನ್ವಸ್ ಹಾಗೂ ಹೆಡ್ಡೂಲ್ ಟ್ರೈಬ್ಸ್‌ನವರು ಇರುತ್ತಾರೆ, ಇವರಿಗೆ ಯಾವ ರೀತಿ ಸಾಕಷ್ಟು ಕೊಡಬೇಕು ಎನ್ನುವುದು ಇವೆಲ್ಲ ಇದೆ. ಎಲ್ಲಿ ಬೇಕಾದರೂ ಇಂತಹ ಟೀಚರುಗಳನ್ನು ವರ್ಗ ಮಾಡುವಾಗ ಅವರಿಗೆ ಬೇಕಾದ ಸೌಲಭ್ಯಗಳು ಬರುತ್ತವೆ. ಇದಕ್ಕಾಗಿ ಒಂದು ಸಲಹೆ ಬಂದಿರುವುದು ಏನು ಸಾರಿ ವರ್ಗ ಮಾಡಿದ ಆರ್ಡರನ್ನು ಕ್ಯಾನ್ಸಲ್ ಮಾಡಿ ಪುನಃ ಬೇರೆ ಕಡೆಗೆ ವರ್ಗ ಮಾಡಿದ್ದು ಇರುವ ಹಾಗೆ ಮಾಡಬೇಕು ಅಂತ್ಯ ವರ್ಗ ಮಾಡುವುದಕ್ಕೆ ಮಂಜೂರಾತಿ ಪಡೆದು ಮಾಡಬೇಕು ಎಂದು ಸರಕಾರ ಯೋಚನೆ ಮಾಡುತ್ತಿದೆ. ಅಷ್ಟು ಮಾತ್ರಕ್ಕೆ ಇದನ್ನು ಕಟ್ಟುನಿಟ್ಟಾಗಿ ಮಾಡಲು ಟ್ರಾನ್ಸ್‌ಫರ್ ರೂಲ್ಸ್‌ಗಳನ್ನು ಮಾಡಬೇಕು ಎಂದು ಸರಕಾರದ ಯೋಚನೆ ಇದೆ. ಈ ಸರ್ ಬರುವುದಕ್ಕೆ ಮುಂಚೆ ಇಷ್ಟು ಕಾಂಪ್ಲಿಕೇಷನ್‌ಗಳು ಇರಲಿಲ್ಲ. ಎಷ್ಟೋ ಜನಕ್ಕೆ ಇಲ್ಲಿ ತನಃ ಫರ್ಮೇಷನ್‌ಗಳಿಗೆ ಆಗಿರಲಿಲ್ಲ, ಎಲ್ಲ ಕಡೆ ಳಿಲ್ಲೂ ಇನ್‌ಚಾರ್ಜ್ ಇಲ್ಲವೇ ಹೆಚ್ಚಪರಿಯಾಗಿಯೇ ಇತ್ತರು. ಇದನ್ನೆಲ್ಲಾ ಸರಿ ಮಾಡಿ ಈಗ ಇಂಟರ್ ಸ್ಕೂಲ್ ಸೀನಿಯಾರಿಟಿ ಕಟ್ಟಿ ಕೂಡ ಫೈನಲೈಜ್ ಮಾಡಲಾಗಿದೆ. ಇದರ ಬಗ್ಗೆ ಕೂಡ ಕೆಲವರು ಸುಪ್ರೀಂ ಕೋರ್ಟಿನವರೆಗೂ ಹೋಗಿ ಇದರ ಲಸನಿ ತು ಹೋಗಿತ್ತು. ಈಚೆಗೆ ಇದನ್ನು ಸರಿ ಮಾಡಿ ಈಗ ಇಂಟರ್ ಸ್ಕೂಲ್ ಸೀನಿಯಾರಿಟಿ ಲಿಸ್ಟ್ ಮಾಡಲಾಗಿದೆ, ಗೈಡೆನ್ಸ್ ಲಿಸ್ಟನ್ನು ಕೂಡ ಮಾಡಿತ್ತಿದ್ದೇವೆ. ಇದರ ಬಗ್ಗೆ ಬಾಯಂ ವ್ಯವಸ್ಥೆ ಮಾಡುತ್ತಿದ್ದೇವೆ, ಬಿಯುಕ್ಯಾ ಪಿನ್ಸಿಕ್ಷ್ ಲೆಟರ್‌ಲಿಸ್ಟ್‌ನಲ್ಲಿ ಇವನ್ನೆಲ್ಲಾ ಮಾಡುವುದರಿಂದ ಎಫಿಷೆನ್ಸಿ ಇನ್ ಅಡ್ಮಿನಿಸ್ಟ್ರೇಷನ್, ಸುಪರ್‌ವಿಷನ್, ಇನ್‌ಸ್ಪೆಕ್ಷನ್ ಇವೆಲ್ಲಾ ಮಾಡುವುದರಿಂದ ಸ್ವಲ್ಪ ಅನುಕೂಲವಾಗುತ್ತದೆ.

ಇನ್ನು ಸಂಬಳದ ಬಗ್ಗೆ ಮಾತಾಡಿ ಹೇಳಿದ್ದಾರೆ ಇದರಲ್ಲಿ ಅನೇಕ ಅನಾಮಲೀಗಳು ಬರುತ್ತಿವೆ. ಇವನ್ನೆಲ್ಲಾ ನಾರ್ಮಲೈಸ್ ಮಾಡಲು ಸರಕಾರ ಪ್ರಯತ್ನ ಮಾಡುತ್ತಿದೆ. ಸರ್ವಿಸ್ ಕಂಡಿಷನ್‌ಗಳಲ್ಲಿ ಬಹಳ ಕಂಪ್ಲಿಕೇಷನ್‌ಗಳಿರುವುದರಿಂದ ಇಷ್ಟು ಕಷ್ಟವಾಗುತ್ತಿದೆ. ಪ್ರತಿನಿತ್ಯ ನನಗೆ ಇನ್ನೂರು, ಮೂನ್ನೂರು ಕಾಗದಗಳು ಬರುತ್ತವೆ. ಇದರಲ್ಲಿ ನೂರಾರಲ್ಲಿ ಇವತ್ತು ಭಾಗ ಅಪ್ಲಿಕೇಷನ್‌ಗಳು ಬೇರೆ ಸರ್ವಿಸ್ ಕಂಡಿಷನ್‌ಗಳಿಗೆ ಸಂಬಂಧಪಟ್ಟವುಗಳೇ ಆಗಿರುತ್ತವೆ. ನನಗೆ ಪ್ರಮೋಷನ್ ಆಗಿಲ್ಲ, ನನಗೆ ಸೀನಿಯಾರಿಟಿ ಕೊಟ್ಟಿಲ್ಲ. ನನಗೆ ಅನ್ಯಾಯವಾಗಿದೆ, ಇದರ ಬಗ್ಗೆ ಕರಾರುವಾಕ್ಕಾಗಿ ಮಾಡಬೇಕು, ಹೀಗೆ ಅನೇಕ ವಿಷಯಗಳು ನಮಗೆ ಬರುತ್ತಿವೆ, ಇವನ್ನೆಲ್ಲಾ ಸರಕಾರ ಸಾಧ್ಯವಾದಷ್ಟು ಇದರಲ್ಲಿ ಇರುವ ಕಷ್ಟಗಳನ್ನು ನಿವಾರಣೆ ಮಾಡಲು ಪ್ರಯತ್ನ ಮಾಡುತ್ತಿದೆ.

ಇನ್ನು ಹೈಸ್ಕೂಲು ತರಗತಿಗಳ ಅಂಕಿಗಳನ್ನು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ನಮ್ಮಲ್ಲಿ ಈಗ ಸುಮಾರು 1968ರ ಹೈಸ್ಕೂಲುಗಳಿವೆ. ಇದರಲ್ಲಿ 14 ಸಾವಿರ ಒನ್ ಮ್ಯಾನ್ ಟೀಚರು ಸ್ಕೂಲುಗಳಾಗಿವೆ. ಎಂದರೆ ಶೇಕಡ ಅರವತ್ತರಷ್ಟು ಏಕೋಪಾಧ್ಯಾಯರುಗಳು ಇರುವ ಹೈಸ್ಕೂಲುಗಳಾಗಿವೆ, ಕೆಲವು ಕಡೆಗಳಲ್ಲಿ ಇಂತಹ ಶಾಲೆಗಳಲ್ಲಿ ಟೀಚರುಗಳು ಕಾಯಲೆಯಿಂದ ಇಲ್ಲಿವೆ ಇನ್ನಿತರ ಕಷ್ಟಗಳಿಂದ ಶಾಲೆಗೆ ಬರದೇ ಹೋದರೆ ತರಗತಿಗಳನ್ನು ಮುಚ್ಚುವ ಸಂದರ್ಭವೂ ಬರುತ್ತದೆ. ಸರಕಾರ ಮಾಡಿರುವ ನೀತಿ ನಿಯಮಗಳ ಪ್ರಕಾರ ಗರಿಗೆ ಒಬ್ಬ ಟೀಚರ್ ಕೊಡಬೇಕೆಂದು ಇದೆ. ಕೆಲವು ಕಡೆ ಇಂಥ ಸ್ಕೂಲುಗಳಲ್ಲಿ ನಾಲ್ಕು ತರಗತಿಗಳಿಗೆ ಒಂದೊಂದು ತರ್ಗದಲ್ಲೂ ಹತ್ತು ಹದಿನೈದು ಹುಡುಗರು ಮಾತ್ರ ಇದ್ದಾಗ ಅಲ್ಲಿಗೆ ಒಬ್ಬ 40 ಅಥವಾ 50 ಹುಡುಗರು ಇರಬಹುದು. ಇಂತಹ ಕಡೆಗಳಲ್ಲಿ ಒಬ್ಬರೇ ಟೀಚರ್ ಇರಬೇಕೆಂದು ಮಾಡಲಾಗಿದೆ. ನಾವತ್ತಕ್ಕೆ ಹೆಚ್ಚಾಗಿ ಹುಡುಗರು ಇರುವ ಕಡೆಗಳಲ್ಲಿ ಇನ್ನು ಒಬ್ಬ ಟೀಚರನ್ನು ನೇಮಕ ಮಾಡಬೇಕೆಂದು ಸರಕಾರವು ನಿರ್ದೇಶನ ಮಾಡಿದೆ, ಇಂತಹ ವ್ಯವಸ್ಥೆ ಈಗ ಮಾಡುತ್ತಿದ್ದೇವೆ. ಏಕೋಪಾಧ್ಯಾಯರ ಸ್ಕೂಲುಗಳೇನೂ ಈಗ ಹೊಸದಾಗಿ ಆಗಿಲ್ಲ. ಹಿಂದಿನಿಂದಲೂ ನಡೆದುಕೊಂಡು ಬರುತ್ತಿದೆ. ಆದುದರಿಂದ ಈಗ ಇವತ್ತ ಏಕೋಪಾಧ್ಯಾಯರುಗಳ ಸ್ಕೂಲುಗಳನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ, 40 ಹುಡುಗರಿಗಿಂತ ಜಾಸ್ತಿ ಇರುವ ಕಡೆಗಳಲ್ಲಿ ಇನ್ನೂ ಒಬ್ಬರು ಟೀಚರನ್ನು ಕೊಡುತ್ತೇವೆ. ಆದರಂತೆ ಮಾಡುತ್ತಿದ್ದೇವೆ.

ಇನ್ನು ಕಟ್ಟಡದ ಬಗ್ಗೆ ಪ್ರಶ್ನೆ ಬಂದಾಗ ಕೆಲವರು 10 ಲಕ್ಷ ರೂಪಾಯಿಗಳನ್ನು ಹಣವನ್ನು ಮೈಸೂರು ರಾಜ್ಯದಲ್ಲಿ ಶಾಲೆಗಳು ಬೇಡವೇ ಬೇಡ ಎಂಬ ಧೋರಣೆಗಳನ್ನು ಮಾಡುತ್ತಿದ್ದೇವೆ. ಅನೇಕ ಕಡೆಗಳಲ್ಲಿ ಕಟ್ಟಡಗಳೂ ಆಗಿವೆ ಎಂದು ನಾನು ಕೇಳಿದ್ದೇನೆ. ಇನ್ನೂ ಕೆಲವು ಕಡೆಗಳಲ್ಲಿ ಅವರು ಕೊಡುವ ಕಾಂಟ್ರಿಬ್ಯೂಷನ್ ಕೊಡದೇ ಇರುವುದರಿಂದಾಗಿ ಅಲ್ಲಿ ಕಟ್ಟಡಗಳು ಪೂರ್ತಿಯಾಗಿಲ್ಲ. ನಮಗೆ ಕಟ್ಟಡಗಳ ಆವಶ್ಯಕತೆ ಎಷ್ಟು ಇತ್ತೋ ಅಷ್ಟು ಎಷ್ಟು ಕಟ್ಟಡಗಳನ್ನು ಮಾಡ

ಬೇಕು ಎನ್ನುವುದರ ಬಗ್ಗೆ ಸಂಖ್ಯೆಗಳನ್ನು ಇಲ್ಲಿ ಕೊಡುವು ಇಷ್ಟಪಡುತ್ತೇನೆ. ನಮ್ಮಲ್ಲಿ ಈಗ ಇರುವ ತಕ್ಕ ಶಾಲಾ ಕಟ್ಟಡಗಳಲ್ಲದೆ ಇನ್ನೂ ಹತ್ತು ಸಾವಿರ ಶಾಲಾ ಕಟ್ಟಡಗಳು ಬೇಕು ಎಂದು ನಮ್ಮ ಲೆಕ್ಕಾಚಾರದ ಪ್ರಕಾರ ಗೊತ್ತಾಗುತ್ತದೆ. ಒಂದು ಶಾಲಾ ಕಟ್ಟಡಕ್ಕೆ ನಮಾರು ಆರು ಸಾವಿರ ರೂಪಾಯಿಗಳು ಎಂದು ಇಟ್ಟುಕೊಂಡರೂ ನುಮಾರು ಆರು ಕೋಟಿ ರೂಪಾಯಿಗಳು ಕಟ್ಟಡಗಳ ನಿರ್ಮಾಣಕ್ಕೆ ಬೇಕಾಗುತ್ತದೆ. ಇದಲ್ಲದೇ ಈ ಶಾಲೆಗಳಿಗೆ ಬೇಕಾಗುವ ಫರ್ನಿಚರು, ಲೈಬ್ರರಿ, ಬೋರ್ಡು, ಚಾರ್ಟುಗಳು, ಮ್ಯಾಪುಗಳು ಇತ್ಯಾದಿ ಪೀಠೋಪಕರಣಗಳಿಗಾಗಿ 34 ನೂರು ಜನಗಳಿಗೆ ಬೇಕಾಗುತ್ತದೆ. ಒಂದು ಸ್ಕೂಲಿಗೆ 500 ರೂಪಾಯಿಗಳಂತೆ ಇದರ ಬೆಲೆ ಎಂದು ಇಟ್ಟುಕೊಂಡರೂ ಇದಕ್ಕೇ ನುಮಾರು ಒಂದು ಕೋಟಿ ಅರವತ್ತು ಲಕ್ಷದಷ್ಟು ಹಣ ಬೇಕಾಗುತ್ತದೆ. ಇದಲ್ಲದೆ ಸ್ಕಾಫ್ ಗಳಿಗಾಗಿ ಕ್ವಾರ್ಟರುಗಳು ಬೇಕಾಗುತ್ತವೆ. ಇದೂ ಕೂಡ ಅವಶ್ಯವಾಗಿ ಬೇಕಾಗುತ್ತದೆ. ನಾನ್ ಟೀಚಿಂಗ್ ಎಕ್ಸ್‌ಪೆನ್ಸಸ್ ಹಾಗೂ ವಸತಿ ಸೌಕರ್ಯಗಳು ಇವನ್ನು ಮಾಡಲು ನುಮಾರು 51 ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಇನ್ನು ಕೆಲವು ಕಡೆಗಳಲ್ಲಿ ಪೀಸ್ ಕನ್ಸೆಷ್ಷನ್ ಹಾಗೂ ಸ್ಕಾಲರ್‌ಷಿಪ್ ಇವೆ ಎಂದು ಹೇಳಿದರು. ಇದು ಇವೆ. ಮೊದಲನೆ ಸ್ಟಾಂಡರ್ಡ್ ವರ್ಗದಲ್ಲಿ ಸೇರುವಾಗ ನೂರು ಹುಡುಗರು ಇದ್ದರೆ ನಾಲ್ಕನೇ ಸ್ಟಾಂಡರ್ಡ್ ವರ್ಗಕ್ಕೆ ಬರುವ ವೇಳೆಗೆ 40 ಮಂದಿ ಹುಡುಗರುಗಳಾಗುತ್ತಾರೆ. ಇದರಿಂದ ನೋಡಿದರೆ ನೂರರಲ್ಲಿ ನುಮಾರು ಅರವತ್ತರಷ್ಟು ಪೇಸ್ಟ್ ಆಗುತ್ತದೆ. ಕೆಲವು ಕಡೆ ಹುಡುಗರು ಪಾಸಾಗದೆ ಅದೇ ವರ್ಗದಲ್ಲೇ ಉಳಿಯುತ್ತಾರೆ. ಇದರಿಂದ ಇಲ್ಲಿ ಸ್ಕಾಲ್‌ಷಿಪ್ ಆಗುತ್ತದೆ. ಇದರಲ್ಲಿ ಅಯಾ ಊರಿನಲ್ಲಿರುವ ಪಾಸಾಗಿ ವ್ಯಕ್ತಿಗಳು ಹುಡುಗರ ತಂದೆ ತಾಯಿಗಳು ಹೆಚ್ಚು ಆಸಕ್ತಿ ವಹಿಸಬೇಕು ಅಲ್ಲಿರುವ ಪಂಚಾಯಿತಿಗಳು ಆಸಕ್ತಿ ವಹಿಸಿ ಕೆಲಸ ಮಾಡಬೇಕು ಮತ್ತು ಇಲ್ಲಿರುವ ಬಟರ್ ಮೆಂಟ್ ಕಮಿಟಿಗಳವರು ಹೆಚ್ಚು ಆಸ್ಥೆ ವಹಿಸಿದರೆ ಹೆಚ್ಚು ಹುಡುಗರು ಶಾಲೆಗಳಿಗೆ ಬಂದು ವಿದ್ಯಾಭ್ಯಾಸ ಪಡೆಯಲು ಅನುಕೂಲವಾಗುತ್ತದೆ. ಮತ್ತು ಹುಡುಗರ ಹಾಜರಾತಿಯನ್ನೂ ಹೆಚ್ಚು ಮಾಡಲು ಸಹಾಯವಾಗುತ್ತದೆ. ಈಗ ಅಂಚೆಯೆನ್ನ್ ಸ್ಕಾಲರ್‌ಷಿಪ್ ಕೊಡುತ್ತಿದ್ದೇವೆ ಮತ್ತು ಇನ್ನಿತರ ಸೌಕರ್ಯಗಳನ್ನೂ ಕೊಡುತ್ತಿದ್ದೇವೆ, ಇದರಲ್ಲಿ ಸಾರ್ವಜನಿಕರ ಸಹಾಯ ಬೇಕಾಗುತ್ತದೆ ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಇನ್ನು ಈ ವರ್ಷ 243 ಜೂನಿಯರು ಕಾಲೇಜುಗಳನ್ನು ಪ್ರಾರಂಭ ಮಾಡಿದ್ದೇವೆ. ಏಕ ಮಾಡಿದರಿ ಮತ್ತು ಆರಂಭವಾಗಿರುವ ಕಾಲೇಜುಗಳಲ್ಲಿ ಸರಿಯಾದ ಸಲಕರಣೆಗಳನ್ನು ಒದಗಿಸಿ ಕೊಟ್ಟಿಲ್ಲ, ಸಿಬ್ಬಂದಿ ಸೌಕರ್ಯವಿಲ್ಲ ಎಂದು ಕೆಲವರು ಹೇಳಿದರು. ಇರುವ ಸೌಕರ್ಯಗಳಲ್ಲೇ ಇಂತಹ ಜೂನಿಯರು ಕಾಲೇಜುಗಳನ್ನು ಆರಂಭ ಮಾಡಬೇಕೆಂದು ಮಾಡಿದ್ದೇವೆ. ಅನೇಕ ಕಡೆ ದೊಡ್ಡ ದೊಡ್ಡ ತಾಲ್ಲೂಕುಗಳಲ್ಲೇ ಜೂನಿಯರು ಕಾಲೇಜುಗಳು ಬರಲಿಲ್ಲ. ಇಲ್ಲೆಲ್ಲಾ ಜೂನಿಯರು ಕಾಲೇಜುಗಳನ್ನು ಆರಂಭ ಮಾಡಬೇಕೆಂದು ಒತ್ತಡಗಳೂ ಬಂದವು, ನಮ್ಮ ಊಹೆಗೆ ಜೂನಿಯರು ಕಾಲೇಜು ಬೇಕು ಇಲ್ಲಿ ಐದು ಸಾವಿರ ಪ್ರಜಾ ಸಂಖ್ಯೆ ಇದ್ದರೂ ಇಲ್ಲಿ ಪಿ.ಯು.ಸಿ ಕಾಲೇಜಿಲ್ಲ, ಜೂನಿಯರ್ ಕಾಲೇಜಿಲ್ಲ ಎಂದು ಹೇಳುತ್ತಿದ್ದರು. ಇದನ್ನ ಪಿ.ಯು.ಸಿ ಬೋರ್ಡಿನವರು ವಿಚಾರ ಮಾಡಿ ಅವರು ಶಿಫಾರಸು ಮಾಡಿರುವಂತೆ ಈಗ 243 ಜೂನಿಯರು ಕಾಲೇಜುಗಳನ್ನು ಆರಂಭ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೇನೋ ಒಂದು ನಿರ್ಧಾರದಲ್ಲಿ ಇಲ್ಲಿ ಹೇಳುತ್ತ, ಇನ್ನು ಮುಂದೆ ಕಾಲೇಜುಗಳನ್ನು ಹೆಚ್ಚು ಮಾಡುವ ನೀತಿಯನ್ನು ಅನುಸರಿಸಬಾರದು ಎಂದು ಹೇಳಿದರು. ಆದರೆ ನಾನು ಅವರಿಗೆ ತಿಳಿಸಿ ಎಲ್ಲಿ ಇಂತಹ ಕಾಲೇಜುಗಳು ಅವಶ್ಯಕವಾಗಿದೆಯೋ ಮತ್ತು ಎಲ್ಲಿ ಜನರಿಂದ ಹೆಚ್ಚು ಒತ್ತಡಗಳು ಬರುತ್ತಿವೆಯೋ ಅಂತಹ ಕಡೆಗಳಲ್ಲಿ ಜೂನಿಯರು ಕಾಲೇಜುಗಳನ್ನು ಕೊಡಲೇಬೇಕಾಗುತ್ತದೆ ಎಂದು ಹೇಳಿದ್ದೇನೆ, ಇದನ್ನು ಆದಷ್ಟು ಸ್ವಲ್ಪ ಮಾಡಬೇಕೆಂದು ಇದೆ.

ಇನ್ನು 6 ರಿಂದ 10 ವರ್ಷಗಳ ಹುಡುಗರು ಹೆಚ್ಚು ಸಂಖ್ಯೆಯಲ್ಲಿ ಶಾಲೆಗಳಿಗೆ ಬರುತ್ತಿಲ್ಲ. ಇದಕ್ಕೆ ಒಂದು ರೀತಿಯಾದ ಇನ್‌ಸೆಂಟಿವ್‌ಗಳನ್ನು ಕೊಡಬೇಕೆಂದು ಹೇಳಿದರು. ಈಗಾಗಲೇ ಮಿಡ್ ಡೇ ಮೀಲ್ಸ್, ಪಬ್ಲಿಯಲ್ಲಿ ಕಾನ್ಸ್ಟಬಲ್ ಹುಡುಗರಿಗೆ ಸ್ಲೇಟು ಪುಸ್ತಕಗಳು, ಯೂನಿಫಾರಂಗಳು ಇನ್ನೆಲ್ಲಾ ಒದಗಿಸಿಕೊಡುತ್ತ ಬಂದಿದ್ದೇವೆ, ಅದರಲ್ಲೂ ಖಂಡಿತವಾಗಿ ಪಬ್ಲಿಯಲ್ಲಿ ಕಾನ್ಸ್ಟಬಲ್ ವರ್ಗದ ಮಕ್ಕಳಿಗೆ ಕೊಡಬೇಕೆಂಬುದೂ ಇದೆ. ಇದು ಎಲ್ಲರಿಗೂ ಕೊಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಹತ್ತು ಲಕ್ಷ ಮಕ್ಕಳಿಗೆ ಕೊಟ್ಟರೂ ಸಹ 6 ಕೋಟಿ ರೂಪಾಯಿಗಳ ಖರ್ಚು ಬರುತ್ತದೆ. ಮಾನ್ಯ ಸದಸ್ಯರು ಸರ್ಕಾರ ಏನು ಮಾಡಿಲ್ಲ, ಏತಕ್ಕೆ ಮಾಡಲಿಲ್ಲ, ಕಳೆದ ಒಂದು ವರ್ಷದಿಂದ ಏನು ಮಾಡಿದ್ದೀರಿ ಎಂಬುದಾಗಿ ಎಲ್ಲ ಪ್ರಶ್ನೆ ಮಾಡುತ್ತಾರೆ. ಈ ಕಾರಣದಿಂದ ನಮ್ಮ ಕಷ್ಟಗಳನ್ನು ಮಾನ್ಯ ಸದಸ್ಯರಿಗೆ ತಿಳಿಸೋಣವೆಂದು ಈ ಉಪನ್ಯಾಸಗಳನ್ನು ಕೊಡುತ್ತಿದ್ದೇನೆ. ನಾವೂ ಸಹ ಪ್ರತಿನಿಧಿಗಳೇ, ನೀವೂ ಸಹ ಪ್ರತಿನಿಧಿಗಳೇ ಆಗಿದ್ದೀರಿ. ಏನೋ ಆಕಸ್ಮಿಕ

(ಶ್ರೀ ಎ. ಆರ್. ಬದರಿನಾರಾಯಣ)

ವಾಗಿ ನಾನು ಮಂತ್ರಿಯಾಗಿದ್ದೇನೆ. ನಾಳೆ ದಿವಸ ಆ ಕಡೆ ಇರುವ ಸದಸ್ಯರುಗಳು ಮಂತ್ರಿಗಳಾಗ ಬಹುದು. ಆದಕಾರಣ ಇರುವ ಕಷ್ಟಗಳನ್ನು ತಿಳಿಸುತ್ತಿದ್ದೇನೆ. Everyone of us must get involved in this and see how we could solve this colossal problem. ಈ ದೃಷ್ಟಿಯಿಂದ ಇದನ್ನು ನಾನು ಹೇಳುತ್ತಿದ್ದೇನೆ.

ಇಂದು ನಮ್ಮ ರಾಜ್ಯದಲ್ಲಿ ಶೇಕಡ 60 ರಷ್ಟು ಹೈಯ್ಯವೇಟ್ ಮೇನೇಜ್‌ಮೆಂಟ್‌ಗಳಿವೆ. ಈ ಮೇನೇಜ್‌ಮೆಂಟ್‌ಗಳಲ್ಲಿ ಬೇಕಾದಷ್ಟು ಮಾಲ್‌ಪ್ರಾಕ್ಟಿಸಸ್ ಆಗುತ್ತಿತ್ತು, ಈಗಲೂ ಆಗುತ್ತಿದೆ ಎಂಬ ಕಾರಣದಿಂದ ಅದನ್ನು ಕಡಿಮೆ ಮಾಡುವುದಕ್ಕಾಗಿ ನಾವು ಬಹಳವಾಗಿ ಪ್ರಯತ್ನ ಮಾಡುತ್ತಿದ್ದೇವೆ. ಈ ವಿಚಾರವಲ್ಲಿ ಪ್ರಯತ್ನ ಮಾಡಬೇಕೆಂಬ ಪ್ರಾಮಾಣಿಕತೆ ಇದೆ, ಶ್ರದ್ಧೆ ಇದೆ ಮತ್ತು ಆಸಕ್ತಿ ಕೂಡ ಇದೆ. ಅದಕ್ಕಾಗಿಯೇ ತಪ್ಪು ಮಾಡಿದವರನ್ನು ಕಂಡುಹಿಡಿದು ಶಿಕ್ಷೆಕೊಡಿಸುವ ನಲುವಾಗಿ ಒಬ್ಬರು ಸ್ಪೆಷಲ್ ಆಫೀಸರನ್ನು ನೇಮಕ ಮಾಡಿದ್ದೇವೆ. ಅದರಂತೆ ಈಗಾಗಲೇ ಡಿ. ಡಿ. ಪಿ. ಐ. ಒಬ್ಬರನ್ನು ಮತ್ತು ಎ. ಇ. ಒ. ಒಬ್ಬರನ್ನು ತಪ್ಪು ಮಾಡಿದ್ದಾರೆಂಬ ಕಾರಣದಿಂದ ಸಸ್ಪೆಂಡ್‌ನಲ್ಲಿ ಇಡಲಾಗಿದೆ. ಈ ಬಗ್ಗೆ ವೈಯಕ್ತಿಕವಾಗಿ ಹೇಳಬೇಕೆಂದರೆ, ಶಿಕ್ಷೆ ಕೊಡುವುದರಲ್ಲಿ ನನಗೆ ನಂಬಿಕೆ ಇಲ್ಲ. ಸಾಧಾರಣವಾಗಿ ಅವರಲ್ಲಿರತಕ್ಕಂಥ ಒಳ್ಳೆಯದನ್ನು ಪ್ರಚೋದನೆ ಮಾಡಿ ಒಳ್ಳೆಯ ಒಬ್ಬ ಸಾರ್ವಜನಿಕ ಸೇವಕರನ್ನಾಗಿ ಮಾಡತಕ್ಕಂಥದ್ದು ಒಳ್ಳೆಯದೆಂದು ನನ್ನ ವೈಯಕ್ತಿಕ ನೀತಿ. ನಾನು ಯಾರಿಗೂ ಶಿಕ್ಷೆ ಮಾಡುವುದಕ್ಕೆ ಹೋಗುವುದಿಲ್ಲ. ಇದರಿಂದ ವಿರೋಧ ಹೆಚ್ಚಿ ಪ್ರಯೋಜನವಾಗುವುದು ಕಡಿಮೆ. ಆದರೂ ಅನಿವಾರ್ಯವಾಗಿ ಇಬ್ಬರು ಅಧಿಕಾರಿಗಳಿಗೆ ಶಿಕ್ಷೆ ವಿಧಿಸುವ ಪರಿಸ್ಥಿತಿ ಬಂದಿದೆ.

ಇನ್ನು ನಾವು 5 ನೇ ಪಂಚವಾರ್ಷಿಕ ಯೋಜನೆಯಲ್ಲಿ ಏನು ಮಾಡಬೇಕಾಗಿದೆ ಎಂಬುದನ್ನು ನೋಡಿದಾಗ, 1980 ನೇ ಇಸವಿಯೊಳಗೆ 6 ರಿಂದ 10 ವರ್ಷ ವಯಸ್ಸಿನ ಮಕ್ಕಳೆಲ್ಲರನ್ನೂ ಶೇಕಡ ನೂರರಷ್ಟು ಅಕ್ಷರಸ್ಥರನ್ನಾಗಿ ಮಾಡಬೇಕೆಂಬ ನೀತಿಯನ್ನು ಕೇಂದ್ರ ಸರ್ಕಾರ ಹಾಕಿ ಕೊಂಡಿದೆ. ಅದನ್ನು ಪ್ರಾಂತ್ಯ ಸರ್ಕಾರ ಗಳು ಒಪ್ಪಿಕೊಂಡಿವೆ. ಈಗ 90 ಪರ್ಸೆಂಟ್‌ವರೆಗೆ ಎನ್‌ರೋಲ್‌ಮೆಂಟ್ ಆಗಿದೆ. ಹತ್ತು ಪರ್ಸೆಂಟ್ ಹಾರ್ಡ್‌ಕೋರ್ ಇದೆ. ಇದಕ್ಕೆ ಕಾರಣ ತಂದೆ ತಾಯಿಂದಿರುಗಳಿಗೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕೆಂಬ ಶ್ರದ್ಧೆ ಇಲ್ಲದಿರುವುದು, ಮತ್ತು ಇನ್ನೂ ಅನೇಕ ಕಾರಣಗಳು ಇರಬಹುದು. ಮಕ್ಕಳನ್ನು ಶಾಲೆಗೆ ಕಡ್ಡಾಯವಾಗಿ ಸೇರಿಸುವ ಬಗ್ಗೆ ಏನಾದರು ಇನ್‌ಸೆಂಟಿವ್ ಕೊಡಬೇಕೆಂಬ ಯೋಚನೆ ಸರ್ಕಾರಕ್ಕೆ ಇದೆ. ಕೇಂದ್ರವು ಇದನ್ನು ಒಪ್ಪಿಕೊಂಡಿದೆ. ಮುಖ್ಯವಾಗಿ ಈಗ ಆಗುತ್ತಿರುವ ವೇಸ್ಟೇಜನ್ನು ಕಡಿಮೆ ಮಾಡಿ ಸ್ಟಾಂಡರ್ಡ್ ಹೆಚ್ಚುಮಾಡಬೇಕು ಕ್ವಾಲಿಟಿಯನ್ನು ಇಂಪ್ರೂವ್ ಮಾಡಬೇಕು ಮತ್ತು ಶಿಕ್ಷಕರಿಗೆ ಇನ್—ಸರ್ವಿಸ್ ಟ್ರೇನಿಂಗ್ ಕೊಡಬೇಕೆಂಬ ಯೋಚನೆ ಸಹ ಇದೆ. 5 ನೇ ಪಂಚವಾರ್ಷಿಕ ಯೋಜನೆಯಲ್ಲಿ 8 ಲಕ್ಷದ 47 ಸಾವಿರ ಮಕ್ಕಳನ್ನು ಒಂದರಿಂದ ನಾಲ್ಕನೇ ತರಗತಿಯವರೆಗೆ ದಾಖಲೆ ಮಾಡಬೇಕೆಂದು ನಿರೀಕ್ಷೆ ಇಟ್ಟುಕೊಂಡಿದ್ದೇವೆ. ಅದೇ ರೀತಿ 5 ರಿಂದ 7 ನೇ ತರಗತಿಯವರೆಗೆ 4 ಲಕ್ಷದ 94 ಸಾವಿರ ಮಕ್ಕಳನ್ನು ಮಾಡಬೇಕೆಂದು ನಿರೀಕ್ಷೆ ಇಟ್ಟುಕೊಂಡಿದ್ದೇವೆ. 5 ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಒಟ್ಟು 43,680 ಉಪಾಧ್ಯಾಯರುಗಳು ಬೇಕಾಗುತ್ತಾರೆ. ಶೇಕಡ ನೂರಷ್ಟು ಮಕ್ಕಳನ್ನು ಅಕ್ಷರಸ್ಥನ್ನಾಗಿ ಮಾಡಲು ಇಷ್ಟು ಜನ ಉಪಾಧ್ಯಾಯರುಗಳು ಬೇಕಾಗುತ್ತಾರೆ. ಇದಕ್ಕೆ ಖರ್ಚು 31 ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಾನ್—ಟೀಚಿಂಗ್ ಸ್ಟಾಫ್‌ಗೆ 51 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಕ್ವಾಸ್ ರೂಮ್ಸ್‌ಗಾಗಿ 12 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಎಕ್ವಿಪ್‌ಮೆಂಟ್‌ಗಾಗಿ ಒಂದು ಕೋಟಿ 65 ಲಕ್ಷ ಬೇಕಾಗುತ್ತದೆ ಟೀಚರುಗಳಿಗೆ ಟ್ರೇನಿಂಗ್ ಕೊಡಲು 5 ಕೋಟಿ 48 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಹರಿಜನ ಗಿರಿಜನರು ಮತ್ತು ದುರ್ಬಲ ವರ್ಗದವರಿಗೆ ಇನ್‌ಸೆಂಟಿವ್ ಕೊಡುವ ನಲುವಾಗಿ ಮತ್ತು ಗರ್ಲ್ಸ್ ಎಜುಕೇಷನ್‌ಗಾಗಿ 13 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ನಾವು ನಿರೀಕ್ಷೆ ಮಾಡಿದ್ದೇವೆ.

ಶ್ರೀ ಎಂ ಎಸ್. ಕೃಷ್ಣನ್.—ಇಷ್ಟೊಂದು ಹಣದ ಖರ್ಚನ್ನು ತೋರಿಸಿ ನಮ್ಮನ್ನು ಹೆದರಿಸುತ್ತಿದ್ದೀರಿ. ಇಷ್ಟೊಂದು ಹಣ ನಮಗೆ ಕೇಂದ್ರದಿಂದ ಸಿಗುತ್ತದೆಯೇ ಹೇಗೆ ?

ಶ್ರೀ ಎ. ಆರ್. ಬದರಿನಾರಾಯಣ.—ಇದ್ದುದನ್ನು ಇದ್ದ ಹಾಗೆ ಬಿಚ್ಚಿ ತಮಗೆ ಹೇಳುತ್ತಿದ್ದೇನೆ. ಈ ರೀತಿ ಇದ್ದುದನ್ನು ಬೆಳಕಿಗೆ ತಮ್ಮ ಮನಸ್ಸನ್ನು ಒಲಿಸಿಕೊಳ್ಳಬೇಕೆಂಬುದೇ ನನ್ನ ಆಶೆ. ಹಣದ ಖರ್ಚನ್ನು ತೋರಿಸಿ ನಿಮ್ಮನ್ನು ಬೆದರಿಸುವ ಉದ್ದೇಶ ನನಗೆ ಇಲ್ಲ. ಕೇಂದ್ರ

ಸರ್ಕಾರವವರು 5 ನೇ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯಾ ಇಲಾಖೆಗೆ 2200 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಅದರಂತೆ ನಮ್ಮ ಮೈಸೂರು ರಾಜ್ಯಕ್ಕೆ 5 ನೇ ಯೋಜನೆಯಲ್ಲಿ 100 ಕೋಟಿ ರೂಪಾಯಿಗಳು ಬರುತ್ತದೆ. ವರ್ಷಕ್ಕೆ ಇಪ್ಪತ್ತು ಕೋಟಿ ರೂಪಾಯಿಗಳ ಪ್ರಕಾರ ಕೇಂದ್ರದಿಂದ ಬರುವುದರಿಂದ ನಾವು ಹೆದರಬೇಕಾದ್ದು ಇಲ್ಲ. 5 ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಖರ್ಚುಗಳನ್ನು ಈ ಹಣದಿಂದ ಕವರ್ ಮಾಡುವುದಕ್ಕೆ ಸಾಧ್ಯವಿದೆ ಎಂಬ ಭರವಸೆ ನನಗಿದೆ. ಕೇಂದ್ರ ಸರ್ಕಾರದ ಸಹಾಯ ಇಲ್ಲದೆ ನಾವು ಇದನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ. ರಾಜ್ಯಾಂಗದ ಪ್ರಕಾರ ಎಲ್ಲ ಮಕ್ಕಳಿಗೂ ಕಡ್ಡಾಯವಾಗಿ ಶಿಕ್ಷಣ ಕೊಡಬೇಕೆಂದು 1960 ನೇ ಇಸವಿಯಲ್ಲಿಯೇ ಒಪ್ಪಿಕೊಂಡಿದ್ದರೂ ಸಹ 1973 ನೇ ಇಸವಿಯಲ್ಲಿಯೂ ಅದು ಸಾಧ್ಯವಾಗಿಲ್ಲ. ಈ ಕಾರಣದಿಂದ 1980 ನೇ ಇಸವಿಯೊಳಗಾದರೂ ಎಲ್ಲ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡೋಣ ಎಂದು ತೀರ್ಮಾನಕ್ಕೆ ಬಂದಿದ್ದೇವೆ. ಅದಕ್ಕೆ ಕೇಂದ್ರವೂ ಸಹ ಸಹಾಯ ಮಾಡುವುದಕ್ಕೆ ಸಿದ್ಧವಿದೆ. ಮಾನ್ಯ ಸದಸ್ಯರುಗಳು ಮಾತನಾಡುವಾಗ ಶಿಕ್ಷಕರಿಗೆ ಇನ್—ಸರ್ವಿಸ್ ಟ್ರೇನಿಂಗ್ ಕೊಡಬೇಕು, ಶಿಕ್ಷಕರನ್ನು ನೋಡಿಕೊಳ್ಳಲು ಸರಿಯಾದ ಅಡ್ಮಿನಿಸ್ಟ್ರೇಷನ್ ಇರಬೇಕು, ಸ್ಕೇಲ್ಸನ್ನು ಟೀಚ್ ಮಾಡಲು ಸರಿಯಾದ ಅನುಕೂಲಗಳು ಇರಬೇಕು, ಮಕ್ಕಳಿಗೆ ಪ್ರೈಮರೀ ಶಾಲೆಗಳಿಂದಲೇ ಕೈಕೆಲಸ ಕಲಸಬೇಕು ಮತ್ತು ಈ ಇಲಾಖೆ ಪುನರ್—ರಚನೆಯಾಗಬೇಕೆಂದು ಹೇಳಿದರು. ಮಕ್ಕಳಿಗೆ ಕೈಕೆಲಸವನ್ನು ಕಲಸದಿದ್ದರೆ ನಾಳೆ ಎಲ್ಲರೂ ಸರ್ಕಾರೀ ಕೆಲಸಕ್ಕೇ ಕಾಯುತ್ತಾರೆ. ಅದಕಾರಣ ಇನ್ನು ಮುಂದೆ ಮಕ್ಕಳಿಗೆ ಕೈಕೆಲಸ ಕಲಸುವ ಏರ್ಪಾಡನ್ನು ಮಾಡಬೇಕೆಂದಿದ್ದೇವೆ. ಇದಕ್ಕೆ ಹತ್ತು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮಾನ್ಯ ಕೃಷ್ಣನ್ ಅವರು ಫಿಗರ್ಸ್ ಹೇಳಿ ಎದುರಿಸಬೇಕು ಎಂದು ಹೇಳಿದರು. ನಾವು ಯಾರು? ಅವರು ಯಾರು? ಎಲ್ಲರೂ ಪ್ರಜಾಪ್ರತಿನಿಧಿಗಳೇ ; ನಾಳೆ ಅವರೂ ಸಹ ಮಂತ್ರಿಗಳಾಗಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳುವ ಧಾಟಿ ನೋಡಿದರೆ ನಮಗೆ ಹೆದರಿಕೆಯಾಗುತ್ತದೆ. ನಿಮ್ಮ ಯೋಜನೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ನಾಳೆ ದಿವಸ ಹಣ ಇಲ್ಲದಿದ್ದರಿಂದ ನಾವು ಏನೂ ಮಾಡುವುದಕ್ಕಾಗಲಿಲ್ಲ ಎಂದು ಹೇಳಿಬಿಡುತ್ತೀರಿ. "ಅಡಿ ಆನ್ನಾಕ ಅವಳೇ ಇಲ್ಲೆ ಪುಳ್ಳಿ ಪೇರು ರಾಮಕೃಷ್ಣ" ಅನ್ನುವಂತೆ ಆಗಬಾರದು.

ಶ್ರೀ ಎ. ಆರ್. ಬದರೀನಾರಾಯಣ.—ಮದುವೆಯೂ ಆಗಿದೆ, ಮಗುವೂ ಹುಟ್ಟಿದೆ, ಮಗುವಿಗೆ ಹೆಸರನ್ನೂ ಇಡುತ್ತೇವೆ. ಕಳೆದ ಒಂದು ವರ್ಷದಿಂದ ನಾವು ಏನನ್ನೂ ಮಾಡಲಿಲ್ಲ ಎಂದು ಮಾನ್ಯ ಸದಸ್ಯರು ಕೆಲವರು ಹೇಳಿದ್ದರಿಂದ ಈ ವಿವರಗಳನ್ನು ಕೊಡುತ್ತಿದ್ದೇನೆ. ಇರತಕ್ಕಂಥ ವಿಷಯಗಳನ್ನು ನಾನು ಹೇಳುವುದು ಬೇಡವೋ, ತಮಗೆ ತಿಳಿಯುವುದು ಬೇಡವೋ ಎಂದು ಕೇಳುತ್ತೇನೆ. ನಮಗೆ ಇರುವ ನನ್ಮಿತ್ರಶಕ್ತಿಯಲ್ಲಿ, ಇರುವ ಸಾಕಾರ್ಯಗಳಲ್ಲಿ ಇಷ್ಟನ್ನು ಮಾಡಿದ್ದೇವೆ ಅದರಲ್ಲಿ ಏನಾದರೂ ಲೋಪದೋಷ ಇದ್ದರೆ ತಿಳಿಸಿ ಎಂದು ನಾನು ಹೇಳುತ್ತಿದ್ದೇನೆ. ಬಿಚ್ಚು ಮನಸ್ಸಿನಿಂದ ನಾನು ಹೇಳಿದರೆ ತಾವು ಹೆದರಿಸುತ್ತಿದ್ದೀರಾ ಎಂದು ಹೇಳಿದರೆ ಹೇಗೆ ?

ಶ್ರೀ ಎಚ್. ಎಸ್. ಸಿದ್ದಪ್ಪ.—5 ನೇ ಪಂಚವಾರ್ಷಿಕ ಯೋಜನೆ ಪಾಂಚಾಲಿ ಯೋಜನೆ ಆದೀತು ಎಂದು ಭಯ ಆಗುತ್ತೆ ;

ಶ್ರೀ ಎ. ಆರ್. ಬದರೀನಾರಾಯಣ.—ನೆರಳನ್ನು ನೋಡಿ ದೆವ್ವ ಎಂದು ತಾವು ತಿಳಿದುಕೊಂಡರೆ ನಾವು ಏನು ಮಾಡುವುದಕ್ಕಾಗುತ್ತದೆ. ತಾವು ಧೈರ್ಯ ತೆಗೆದುಕೊಳ್ಳಬೇಕು. 5 ನೇ ಪಂಚವಾರ್ಷಿಕ ಯೋಜನೆಯಲ್ಲಿ ಏನು ಮಾಡಬೇಕೆಂದಿದ್ದೇವೆಂಬ ಬಗ್ಗೆ ಹಿನ್ನೆಲೆಯನ್ನು ಕೊಟ್ಟೆ. ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮಾತನಾಡುತ್ತ ಇಂದು ಒಳ್ಳೆಯ ಸೆಕ್ರೆಟ್ರಿಯೇಟ್ ರಿಜಲ್ಟ್ ಇಲ್ಲ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದರು. We cannot perform miracles ; we can work to our best ability. ಇರುವ ಸಾಕಾರ್ಯಗಳಲ್ಲಿ ಎಷ್ಟು ಮಾಡಬಹುದೋ ಅಷ್ಟನ್ನೂ ಮಾಡಿದ್ದೇವೆ. ಮುಂಬೈನಲ್ಲಿ ವಿದ್ಯಾಭ್ಯಾಸಕ್ಕಾಗಿಯೇ 120 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಮದ್ರಾಸ್‌ನಲ್ಲಿ 90 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ನಮಗಿಂತ ಚಿಕ್ಕ ರಾಜ್ಯವಾದ ಕೇರಳಾದಲ್ಲಿ 70 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ತಾವು ಸಹ ಜಾಸ್ತಿ ಖರ್ಚು ಮಾಡಿ.

ಶ್ರೀ ಎ. ಆರ್. ಬದರೀನಾರಾಯಣ.—ನಮಗೆ ಇರುವ ಆದಾಯದಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಹಂಚಿಕೊಳ್ಳಬೇಕಾಗುತ್ತದೆ:

ಶ್ರೀ ಎಂ. ಎಸ್. ಕೃಷ್ಣನ್.—ಹಣಕಾಸಿನ ಸಚಿವರನ್ನು ನೀವು ಒಲಿಸಿಕೊಳ್ಳಬೇಕು.

ಶ್ರೀ ಎ. ಆರ್. ಬದರೀನಾರಾಯಣ್.—ಅವರು ಉದಾರವಾಗಿ 68 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೋದ ವರ್ಷಕ್ಕಿಂತ ಈ ವರ್ಷ 8 ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದ್ದಾರೆ. ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಈ ಇಲಾಖೆಯಲ್ಲಿ ಏನೂ ಮಾಡಿಲ್ಲ ಎಂದು ಹೇಳಿದರು, ಏತಕ್ಕೆ ಮಾಡಿಲ್ಲ, ಈಗ ಏನು ಮಾಡಿದ್ದೇವೆ, ಮುಂದೆ ಹೇಗೆ ಮಾಡುತ್ತೇವೆ ಎನ್ನುವ ತಕ್ಕಂಥಾದ್ದನ್ನು ಎಲ್ಲಾ ಕಂಪ್ಲೀಟ್ ಪಿಕ್ಚರ್ ಹೇಳಿದ್ದೇನೆ. ಒಬ್ಬರು ಮಾನ್ಯ ಸದಸ್ಯರು ನಾನು ವಿಧಾನಸೌಧವನ್ನು ಕಟ್ಟಿಸಿದರೂ ಕೊಡುತ್ತೇನೆ ಎಂದು ಹೇಳಿದ್ದಾರೆ. ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ. ಅಧಿಕಾರಿಗಳಲ್ಲಿ ಕೆಟ್ಟ ಜಾತಿ ಇದೆ. ಅಧಿಕಾರಿಗಳು ಯಾರಾದರೂ ಕೆಟ್ಟದ್ದು ಮಾಡುತ್ತಾ, ಇರುವಾಗ ಅದು ಸರಿಯಲ್ಲ ಹೀಗೆ ಮಾತು ಎಂದರೆ ಅದನ್ನು ತಿದ್ದಿಕೊಳ್ಳುವ ಜನರೂ ಇದ್ದಾರೆ. ಈ ದೃಷ್ಟಿಯಿಂದ ಅವರನ್ನು ತಿದ್ದಲು ಸಾಧ್ಯವಿದೆ. ಆದರೆ ಬಹಳ ಕೆಟ್ಟ ಅಧಿಕಾರಿಗಳು ಇದ್ದರೆ ಏನಾದರೂ ಮಾಡಲೇ ಬೇಕು. ಆದ್ದರಿಂದ ಅಂಥವರನ್ನು ಸಸ್ಪೆನ್ಷನ್‌ನಲ್ಲಿ ಇಟ್ಟಿದ್ದೇವೆ. ಕೆಲವರು ತಿದ್ದಿಕೊಂಡಿದ್ದಾರೆ. ನಮ್ಮ ದೇಶದಲ್ಲಿ ಗಾಂಧೀಜಿಯವರನ್ನು ಗುಂಡು ಹಾಕಿ ಕೊಂದ ಜನ ಇದ್ದಾರೆ. ಬರ್ನಾರ್ಡ್ ಷಾ ಹೇಳಿದರು, ತುಂಬಾ ಒಳ್ಳೆಯವರಾಗಿರೋದು ತುಂಬಾ ಕೆಟ್ಟದ್ದು ಎಂದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಅದು ನಿಮಗಾಗಬರದು.

ಶ್ರೀ ಎ. ಆರ್. ಬದರೀನಾರಾಯಣ್.—ಅಂಥಾದ್ದು ಆಗದೇ ಇರಲಿ ಎಂದು ದೇವರನ್ನು ಪ್ರಾರ್ಥನೆ ಮಾಡಿ. ಈಗ ಪ್ರಜಾಪ್ರಭುತ್ವದಲ್ಲಿ ನಾವು ಜನರ ಮನೆಯ ಬಾಗಿಲಿಗೆ ಹೋಗಿ ಪೋಟಿಗಾಗಿ ಭಿಕ್ಷೆ ಕೇಳುತ್ತೇವೆ. ನಾವು ಜನಗಳ ಆಗಾಗ್ಗೆ ಭೇಟಿ ಮಾಡುತ್ತೇವೆ. ನಮಗೆ ಪರಿಚಯ ವಿರುತ್ತದೆ. ಆದ್ದರಿಂದ ನಮಗೆ ಜನಗಳ ಕಷ್ಟ ಸುಖಗಳ ಅನುಭವ ನಮಗೆ ಇರುತ್ತದೆ. ಆದರೆ ಜನಗಳ ಕಷ್ಟಸುಖಗಳ ಅನುಭವ ಅಧಿಕಾರಿಗಳಿಗೆ ಬರುವುದಿಲ್ಲ. ಅಧಿಕಾರಿಗಳಿಗೆ ನೇರವಾಗಿ ಜನಗಳ ಸಂಪರ್ಕ ಇರುವುದಿಲ್ಲ. ಆದ್ದರಿಂದ ಈ ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳು ಜನಗಳ ಆಕ್ಷೇಪಣೆಗಳನ್ನು ಅಭಿಪ್ರಾಯಪಡುವಂತಹ ಅವಕಾಶವನ್ನು ಉಂಟುಮಾಡತಕ್ಕದ್ದು ನಮ್ಮ ಪಾಲಿಗೆ ಬಿದ್ದಿದೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳು ಅಡಳಿತ ದೃಷ್ಟಿಯಿಂದ ಜನಗಳ ಅಪೇಕ್ಷೆಯಂತೆ ಅವರಿಗೆ ಸಹಾಯ ಮಾಡಬೇಕು. ಅಧಿಕಾರಿಗಳು ಎಲ್ಲರೂ 100ಕ್ಕೆ 100 ಜನ ಲಂಚಕೋರರು ಎಂದು ಹೇಳುವುದಕ್ಕಾಗುವುದಿಲ್ಲ. ಆ ರೀತಿ ಹೇಳುವುದೂ ಸರಿಯಲ್ಲ. ಅದರಲ್ಲಿ ಒಳ್ಳೆಯವರೂ ಇದ್ದಾರೆ. ಕೆಟ್ಟವರೂ ಇದ್ದಾರೆ. ಆದ್ದರಿಂದ ಎಲ್ಲರೂ ಕೆಟ್ಟು ಹೋಗಿದ್ದಾರೆ ಎಂದು ಹೇಳತಕ್ಕದ್ದು ಸರಿಯಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮಾನ್ ದೇವೇಗೌಡರು ನಮಗೆ ಪ್ರೀ ಪ್ರೈಮರಿ ಎಜುಕೇಷನ್ ಇಲ್ಲ ಎಂದು ಹೇಳಿದ್ದಾರೆ. ಈಗ ನಮ್ಮ ದೇಶದಲ್ಲಿ 31 ಪರ್ಸೆಂಟ್ ಲಿಟರಸಿ ಇದೆ. ಇನ್ನು ಶೇಕಡಾ 69 ಜನ ಅನಕ್ಷರಸ್ಥರಿದ್ದಾರೆ. ಇವರೆಲ್ಲರನ್ನೂ ನಾವು ಅಕ್ಷರಸ್ಥರನ್ನಾಗಿ ಮಾಡಬೇಕು. ವಿದ್ಯಾವಂತರನ್ನಾಗಿ ಮಾಡಬೇಕು ಇದು ಒಂದು ದೊಡ್ಡ ರಥ ಇದ್ದಹಾಗೆ. ಈ ರಥವನ್ನು ಎಳೆಯುವುದಕ್ಕೆ ನಾವೂ ನೀವೂ ಜನಗಳು ಎಲ್ಲರೂ ಸೇರಿ ಈ ರಥವನ್ನು ಎಳೆಯಬೇಕು. ಇಲ್ಲದಿದ್ದರೆ ಈ ರಥ ಸಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಗೌಡರಿಂದ, ಗೌಡರಿಂದ ಎಂದು ಹೇಳಿಕೊಂಡು ರಥವನ್ನು ಎಳೆಯಬೇಕು.

ಶ್ರೀ ಎ. ಆ ರ್. ಬದರೀನಾರಾಯಣ್.—ಯಾವ ಹೆಸರನ್ನು ಬೇಕಾದರೂ ಹೇಳಿ. ಕೆಲವು ಮಾನ್ಯ ಸದಸ್ಯರು ನಮ್ಮ ಸರ್ಕಾರದ ಪಿದ್ಯಾ ನೀತಿ ಏನಿದೆ ಎಂಬುದಕ್ಕೆ ಒಂದು ಶ್ವೇತಪತ್ರವನ್ನು ಕೊಡಬೇಕು ಎಂದು ಹೇಳಿದ್ದಾರೆ. ಶ್ವೇತ ಪತ್ರವನ್ನು ತಯಾರು ಮಾಡುತ್ತಿದ್ದೇವೆ. ನಿನ್ನೆ ಪಂಚ ವಾರ್ಷಿಕ ಯೋಜನೆ ಪ್ರಾರಂಭ ಆದಾಗ ಇದನ್ನು ಯಾವ ರೀತಿ ಮಾಡಬೇಕು. ಇದಕ್ಕೆ ಎಷ್ಟು ಹಣವನ್ನು ಒದಗಿಸಬೇಕು, ಎಂಬುದನ್ನು ಯೋಚನೆ ಮಾಡಿ ಮುಂದಿನ ಬಜೆಟ್ಟಿನ ವೇಳೆಗೆ ದಕ್ಷಿಣ ಇಲಾಖೆಯ ಕಾರ್ಯಕ್ರಮದ ಶ್ವೇತ ಪತ್ರವನ್ನು ಕೊಡುವ ಹಾಗೆ ವ್ಯವಸ್ಥೆಯನ್ನು ಮಾಡುತ್ತೇವೆ.

ನಮ್ಮ ಕೆಲವು ಮಾನ್ಯ ಸದಸ್ಯರು ಪ್ರಾಥಮಿಕ ವಿದ್ಯಾಭ್ಯಾಸದ ಅಭಿವೃದ್ಧಿಗೆ ಪ್ರತ್ಯೇಕ ಡೈರೆಕ್ಟೋರೇಟ್ ಸ್ಥಾಪನೆ ಆಗಬೇಕೆಂದು ಹೇಳಿದ್ದಾರೆ. ನಮ್ಮ ವಿದ್ಯಾಭ್ಯಾಸ ಇಲಾಖೆಯಲ್ಲಿ ಬಹಳ ಕೆಲಸ ಇದೆ. ಈ ಇಲಾಖೆಗೆ ಒಂದು ದಿವಸಕ್ಕೆ ಎಷ್ಟು ಕಾಗದಗಳು ಬರುತ್ತವೆ ಮತ್ತು ಈ ಇಲಾಖೆಯಿಂದ ಒಂದು ದಿವಸಕ್ಕೆ ಎಷ್ಟು ಕಾಗದಗಳು ಹೊರಗಡೆ ಹೋಗುತ್ತವೆ ಎನ್ನುವ ಅಂಕಿ ಅಂಶಗಳನ್ನು ನೋಡಿದರೆ ಈ ಇಲಾಖೆಯಲ್ಲಿ ಈಗ ಇರತಕ್ಕ ಸಿಬ್ಬಂದಿ ಸಾಲುವುದಿಲ್ಲ, ಎಂದು ಅನಿಸು

ತಿದೆ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಪ್ರಾಥಮಿಕ ವಿದ್ಯಾಭ್ಯಾಸ ಅಭಿವೃದ್ಧಿಗೆ ಪ್ರತ್ಯೇಕ ಡೆರೆಕ್ಟರೇಟ್ ಮಾಡಬೇಕೆಂದು ಏನು ಹೇಳಿದ್ದಾರೆ ಅದನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆ ಮೇಲೆ ನಿರುದ್ಯೋಗ ಸಮಸ್ಯೆಯನ್ನು ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ಮಾರ್ಪಾಡು ಮಾಡುವುದರ ಮೂಲಕ ಬಗೆಹರಿಯುವಂತೆ ಮಾಡುವುದು. ಈಗ ಎಸ್.ಎಸ್.ಎಲ್.ಸಿ. ಲೆವೆಲ್ಲಿನಲ್ಲಿ ಮತ್ತು ಪಿ.ಯು.ಸಿ ಲೆವೆಲ್ಲಿನಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸವಾದ ಮೇಲೆ ತಮ್ಮ ಕಾಲ ಮೇಲೆ ನಿಂತುಕೊಳ್ಳುವಂತೆ, ವೊಕೇಷನಲ್ ಕೋರ್ಸುಗಳನ್ನು ಅಗ್ರಿಕಲ್ಚರ್, ಫಿನಾನ್ಸ್, ಇಂಜಿನಿಯರಿಂಗ್, ಕಾಮರ್ಸ್-ಇತ್ಯಾದಿಗಳನ್ನು ಇಂಟ್ರಡ್ಯೂಸ್ ಮಾಡಬೇಕೆಂದು ಇದೆ. ಹೀಗೆ ಮಾಡಿ ಅವರು ಕಾಲೇಜಿಗೆ ಬರುವ ಹೊತ್ತಿಗೆ ವಿದ್ಯಾರ್ಥಿಗಳು ತಮ್ಮ ಸ್ವಂತ ಬುದ್ಧಿಯಲ್ಲಿ ಏನಾದರೂ ಮಾಡುವುದಕ್ಕೆ ಬರುತ್ತದೆ.

10-00 A.M.

ಆ ಮೇಲೆ ಜೂನಿಯರ್ ಕಾಲೇಜುಗಳಲ್ಲಿ ಸ್ಟಾಫಿಂಗ್ ಪ್ಯಾಟರ್ನ್ ಬಗ್ಗೆ ಸಹ ನಾವು ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಶ್ರೀರನಾಳೆ ಚಂದ್ರಶೇಖರ್‌ರವರು 25 ವರ್ಷಗಳಿಂದ ಆಗದ ಕೆಲಸ ಈ ವರ್ಷ ಆಗಿದೆ ಎಂದು ಹೇಳಿದ್ದಾರೆ. ಅವರು ಮುಕ್ತಕಂಠದಿಂದ ಆಡಿದ ಮಾತುಗಳಿಗೆ ಅವರಿಗೆ ನಾನು ವಂದನೆಯನ್ನು ಸಲ್ಲಿಸುತ್ತೇನೆ.

ಆ ಮೇಲೆ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಸಂಸ್ಕೃತ ಶ್ಲೋಕಗಳ ಮೂಲಕ ಮಾತನಾಡಿದ್ದಾರೆ. ಅವರು ಬಹಳ ಸಲಹೆಗಳನ್ನು ಸಹ ಕೊಟ್ಟಿದ್ದಾರೆ. ಅದನ್ನು ಅನುಕರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಆ ಮೇಲೆ ಕಾಮನ್ ಯೂನಿವರ್ಸಿಟಿ ಆಕ್ಟ್ ಮಾಡಿ ಲಾ ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದೇವೆ. ಅದನ್ನು ಬೇಗನೇ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಆದೇ ರೀತಿ ವನ್ ಮ್ಯಾನ್ ಕಮಿಶನ್ ರಿಪೋರ್ಟ್ ಕೊಟ್ಟಿದ್ದಾರೆ. ಅವರ ಶಿಫಾರಸುಗಳ ಮೇಲೆ ಒಂದು ಎಜುಕೇಷನ್ ಆಕ್ಟ್ ಸಹ ಮಾಡಬೇಕೆಂದು ಯೋಚನೆ ಇದೆ.

ಇನ್ನು ಯೂನಿವರ್ಸಿಟಿಗಳನ್ನು ಹೊಸದಾಗಿ ಮಾಡುವುದರ ಬಗ್ಗೆ ಕೆಲವರು ಟೀಕೆ ಮಾಡಿದ್ದಾರೆ. ಕೆಲವರು ಬೇಕೆಂದು ಹೇಳುತ್ತಿದ್ದಾರೆ, ಕೆಲವರು ಬೇಡ ಎಂದು ಹೇಳುತ್ತಿದ್ದಾರೆ. ಗಜೇಂದ್ರಗಡ್ಕರ್ ಕಮಿಟಿಯವರು ಸಹ 100 ಕಾಲೇಜುಗಳಿಗೆ ಒಂದು ಯೂನಿವರ್ಸಿಟಿ ಇರಬಹುದು ಎಂದು ಹೇಳಿದ್ದಾರೆ. ಅದನ್ನೆಲ್ಲಾ ಪರಿಶೀಲನೆಮಾಡಿ ಎಷ್ಟು ಯೂನಿವರ್ಸಿಟಿಗಳು ಬೇಕೆಂದು ನೋಡಿ ಮಾಡಬೇಕಾಗುತ್ತದೆ. ಯು.ಜಿ.ಸಿ. ಯವರು ಸಹ ಅದಕ್ಕೆ ಗ್ರಾಂಟ್ ಕೊಡುತ್ತಿದ್ದಾರೆ.

ಇನ್ನು ಮ್ಯಾನೇಜ್‌ಮೆಂಟ್ ಆಫ್ ಪ್ರೈವೇಟ್ ಸ್ಕೂಲ್ಸ್. ಇದರ ಬಗ್ಗೆ ಬಹಳ ಉಗ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಆದರೂ ಸಹ ಬಹಳ ಕಾಲಿದಿಂದ ಬೇರೂರಿದಂತಹ ಕಳೆಗಳನ್ನು ಕಿತ್ತುಹಾಕುವುದು ಬಹಳ ಕಷ್ಟ. ಆದರೂ ಸಹ ಎಲ್ಲಿ ಯಾರಿಗಾದರೂ ತೊಂದರೆ ಕೊಡುತ್ತಾರೆ, ಎಲ್ಲಿ ಕಿರುಕುಳ ಕೊಡುತ್ತಾರೆ, ಅಂಥ ಕಡೆ ಟೀಚರ್ಸ್ ಒಂದು ಸೊಸೈಟಿ ಮಾಡಿಕೊಂಡು ಸ್ಕೂಲುಗಳನ್ನು ನಡೆಸಬೇಕೆಂದು ಹೇಳಿದ್ದೇವೆ. ಕೆಲವರು ಹಾಗೆ ಮಾಡಿದ್ದಾರೆ.

ಇನ್ನು ಟೀಚರುಗಳ ಟ್ರಾನ್ಸ್‌ಫರ್ ವಿಚಾರ. ಇದನ್ನು ಮಾಡಲೇ ಬೇಕಾಗುತ್ತದೆ. ಆದರೆ ಅವರಿಗೆ ಸೌಲಭ್ಯಗಳನ್ನು ಜೊದ ಕಡೆಗಳಲ್ಲಿ ಕೊಡಬೇಕಾಗುತ್ತದೆ. ಅದನ್ನು ಕೊಡೋಣ. ಇನ್ನು ಎಜ್ಯುಕೇಟೆಡ್ ಅನಂಪ್ಲಾಯ್‌ಮೆಂಟ್ ವಿಚಾರದಲ್ಲಿ ಕೆಲವು ಸದಸ್ಯರು ಫಿನಿಶಡ್ ಪ್ರೊಡಕ್ಟ್ಸ್ ಬಹಳ ಕೆಟ್ಟು ಹೋಗುತ್ತಿವೆ ಎಂದು ಹೇಳಿದರು. ಬಹುಶಃ ನಮ್ಮ ರಾಜ್ಯದಲ್ಲಿ ಇಂದೂವರೆ ಲಕ್ಷ ಉಪಾಧ್ಯಾಯರುಗಳು ಇದ್ದಾರೆ. ಅವರು ತಮ್ಮ ಕರ್ತವ್ಯವನ್ನು ಈ ಭಾವೀ ಜಗತ್ತಿನ ರೂಪಿಸುವ ಒಂದು ಉದ್ದೇಶ ಇಟ್ಟುಕೊಂಡು ಮಾಡಬೇಕಾಗುತ್ತದೆ ಅವರು ಶ್ರದ್ಧೆ, ಧರ್ಮ, ಮತ್ತು ಸತ್ಯದಿಂದ ಕೆಲಸ ಮಾಡಿದರೆ, ಬಹುಶಃ ನಮ್ಮ ವಿದ್ಯಾಭ್ಯಾಸದಲ್ಲಿ ಒಳ್ಳೆಯ ಫಲಿತಾಂಶವನ್ನು ನಾವು ಪಡೆಯಬಹುದು. ಅವರಿಗೆ ಸರ್ಕಾರದವರು ಕೊಡತಕ್ಕಂತಹ ಸಂಬಳ ಸಾರಿಗೆಗೆ ಸರಿಯಾಗಿ ತಮ್ಮ ಕರ್ತವ್ಯವನ್ನು ಪಾಲನೆ ಮಾಡಿದರೆ ಒಳ್ಳೆಯದು. ಆದ್ದರಿಂದ ಈ ಜವಾಬ್ದಾರಿ ಮುಖ್ಯವಾಗಿ ಅವರ ಮೇಲೆ ಇದೆ. ನಮ್ಮ ಮಾನ್ಯ ಸ್ನೇಹಿತರು ಅಂಥ ಟೀಚರುಗಳಿಗೆ ಒಳ್ಳೆಯ ರೀತಿಯಲ್ಲಿ ಕೆಲಸಮಾಡಿ ಸ್ಕೂಲುಗಳನ್ನು ನಡೆಸುವಂತೆ ಉತ್ತೇಜನ ಕೊಟ್ಟು ಸಲಹೆ ಮಾಡಬೇಕೆಂದು ಹೇಳುತ್ತೇನೆ. ಗುರುಗಳಾಗಿದ್ದವರು ತಮ್ಮ ವರ್ಚಸ್ಸಿನಿಂದ, ತಮ್ಮ ವೈಯಕ್ತಿಕ ಶಕ್ತಿಯಿಂದ, ಹಿಂದಿನ ಕಾಲದಲ್ಲಿ ಹೇಗೆ ಗುರುಗಳು ಇದ್ದರೋ, ಆ ರೀತಿಯಿಂದ ಕೆಲಸ ಮಾಡಬೇಕು. ಅವರಿಂದ ನಮ್ಮ ಮೈಸೂರು ದೇಶದ ಮಕ್ಕಳ ಭವಿಷ್ಯ ಪರಮಪವಿತ್ರವಾಗಬೇಕಾಗಿದೆ. ಅದನ್ನು ಮಾಡಲು ತಾವೆಲ್ಲರೂ ಅವರಿಗೆ ಸಹಕಾರ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವು ವಿ.ಕೆ.ಆರ್.ವಿ. ರಾಯರ ಸಂಸ್ಥೆ ಬಗ್ಗೆ ಹೇಳಿಲ್ಲ.

ಶ್ರೀ ಎ. ಆರ್. ಬದರೀ ನಾರಾಯಣ್.—ವಿ.ಕೆ.ಆರ್.ವಿ. ರಾವ್‌ರವರು ಬೆಂಗಳೂರಿನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್ ಎಂಬುದನ್ನು ಮಾಡಿದ್ದಾರೆ. ಅದಕ್ಕೆ ಕೇಂದ್ರದಿಂದ ಅರ್ಧ ಹಣ ಕೊಡುತ್ತಾರೆ; ನಾವು ಸಹ ಅರ್ಧ ಹಣವನ್ನು ಕೊಡುತ್ತೇವೆ. ವಿದ್ಯಾಭ್ಯಾಸವಲ್ಲಿ ಸರ್ಕಾರ ಮಾಡಬೇಕಾದಂತಹ ಕೆಲಸವನ್ನು ಅವರು ಮಾಡುತ್ತಾರೆ ಅಷ್ಟೆ. ಸರ್ಕಾರದವರು ವಿದ್ಯಾಭ್ಯಾಸದ ಬಗ್ಗೆ ಏನಾದರೂ ಸಮಸ್ಯೆ ಬಂದರೆ, ಅವರ ಸಲಹೆಯನ್ನು ಕೊಡಿ ಎಂದು ಕೇಳುತ್ತಾರೆ; ಅವರಲ್ಲಿ ತಜ್ಞರು ಮತ್ತು ಮೇಧಾವಿಗಳು ಇರುವುದರಿಂದ ಮುಂದಿನ ಪೀಳಿಗೆಯ ಭವಿಷ್ಯದ ಬಗ್ಗೆ ಯಾವ ರೀತಿಯಲ್ಲಿ ನಿಯಮಗಳನ್ನು ಹಾಕಿಕೊಂಡು ಹೋಗಬೇಕೆಂಬುದರ ಬಗ್ಗೆ ಸಲಹೆಗಳನ್ನು ಕೊಡುತ್ತಾರೆ. ಅದ್ದರಿಂದ ಅವರಿಗೆ ವೈಯಕ್ತಿಕವಾಗಿ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಇದನ್ನು ಮಾಡಿಲ್ಲ. ಮೈಸೂರು ದೇಶದಲ್ಲಿ ಸರ್ಕಾರೀ ಮಟ್ಟದಲ್ಲಿ ಇಂಥ ಒಂದು ರಿಸರ್ಚ್ ಸಂಸ್ಥೆ ಇರಬೇಕು, ಮತ್ತು ಇದರ ಮೂಲಕ ದೇಶದ ಕಲ್ಯಾಣಕ್ಕೆ ಬೇಕಾದಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಕೇಂದ್ರಸರ್ಕಾರದವರು ಸಹ ಇದಕ್ಕೆ ಸಹಾಯ ಮಾಡಿದ್ದರಿಂದ ನಾವು ಸಹ ಅವರಿಗೆ ಸಹಾಯ ಮಾಡಿದ್ದೇವೆ. ಅವರಿಗೆ ತಾತ್ಕಾಲಿಕವಾಗಿ ಕಾರ್ಲಟನ್‌ಹಳ್ಳಿಯಲ್ಲಿ ಜಾಗವನ್ನು ಕೊಟ್ಟಿದ್ದೇವೆ. ಅವರು ಪ್ರತ್ಯೇಕವಾಗಿ 35-40 ಎಕರೆ ಜಾಗವನ್ನು ತೆಗೆದುಕೊಂಡಿದ್ದಾರೆ. ಬಹುಶಃ 1-2 ವರ್ಷಗಳಲ್ಲಿ ಅವರು ಅವರ ಹೊಸ ಜಾಗಕ್ಕೆ ಹೊರಟು ಹೋಗಬಹುದು. ಡೆಲ್ಲಿಯಲ್ಲಿ ಇಂತಹ ಒಂದು ಸಂಸ್ಥೆ ಇದೆ. ದಕ್ಷಿಣ ಭಾರತದಲ್ಲಿ ಪ್ರಪ್ರಥಮವಾಗಿ ಇಂಥ ಇನ್‌ಸ್ಟಿಟ್ಯೂಟ್ ಆಗಿರುವುದು. ಬಹುಶಃ ತಾವೆಲ್ಲರೂ ಇಂಥ ಸಂಸ್ಥೆಯನ್ನು ಸ್ವಾಗತ ಮಾಡಬಹುದೆಂದು ಕಾಣುತ್ತದೆ. ಇದು ಇನ್ನೊಬ್ಬರ ಸ್ವಾರ್ಥಕ್ಕಾಗಿ ಮಾಡಿದ್ದಲ್ಲ. ಮಾನ್ಯ ಸದಸ್ಯರಿಗೆ ಇದರ ಬಗ್ಗೆ ತಪ್ಪು ಅಭಿಪ್ರಾಯ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಈ ಇನ್‌ಸ್ಟಿಟ್ಯೂಟ್ ಆಗಬೇಕೇ, ಬೇಡವೇ ? ಇನ್‌ಸ್ಟಿಟ್ಯೂಟ್ ಆಗಬೇಕಾದರೆ ಸರಿಯಾದ ಮಾರ್ಗದಲ್ಲಿ ಹೋಗಬೇಕೆಂದು ಅವರಿಗೆ ಡೈರೆಕ್ಷನ್ ಕೊಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಅಂಡ್ ಇಕನಾಮಿಕ್ ಚೇಂಜ್ ಎಂದು ಮೂಲಭೂತವಾದ ಪ್ರಶ್ನೆಯನ್ನು ಹಿಡಿದುಕೊಂಡು ಅವರು ಕೆಲಸಮಾಡುವುದಕ್ಕೆ ಹೊರಟಿದ್ದಾರೆ. ಇಂಥ ಸಂಸ್ಥೆ ಮಾಡಿಕೊಂಡು ಈ ರೀತಿಯಾಗಿ ಯಾರೋ ಕೆಲವು ಜನರನ್ನು ಬೆಳೆಸುವುದಕ್ಕೆ ಹೋಗುವುದಾದರೆ ಅಂಥಾದ್ದನ್ನು ಪ್ರತಿಭಟನೆ ಮಾಡಬೇಕಾಗುತ್ತದೆ.

ಶ್ರೀ ಎ. ಆರ್. ಬದರೀನಾರಾಯಣ್.—ಮಾನ್ಯ ಸದಸ್ಯರು ಹೇಳಿದಂತೆ ಆಗತಕ್ಕದ್ದು ಸಾಧ್ಯವಿದೆ. ಆದರೆ ಅದನ್ನು ಹೇಗೆ ಹತೋಟಿಯಲ್ಲಿಟ್ಟುಕೊಳ್ಳಬೇಕು, ಏನು ಕಂಡೀಷನ್ಸ್ ಹಾಕಬೇಕು ಎಂಬುದನ್ನು ಬೇಕಾದರೆ ಮಾಡೋಣ. ಆದರೆ ಈ ಸಂಸ್ಥೆಯನ್ನ ಅಭಿಪ್ರಾಯದಲ್ಲಿ ಒಳ್ಳೆಯದಿದೆಯೆಂದು ತಿಳಿದಿದ್ದರಿಂದ ಈ ದೇಶಕ್ಕೆ ಇದರಿಂದ ಒಳ್ಳೆಯದಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದ ಹತೋಟಿ ಈ ಇನ್‌ಸ್ಟಿಟ್ಯೂಟ್ ಮೇಲೆ ಇದೆಯೇ ? ಹಣ ಅಲ್ಲಿ ಯಾವ ರೀತಿಯಾಗಿ ವಿನಿಯೋಗವಾಗಿದೆ.

ಶ್ರೀ ಎ. ಆರ್. ಬದರೀನಾರಾಯಣ್.—ಇಂತಹ ಸಂಸ್ಥೆಮೇಲೆ ಹತೋಟಿಯನ್ನು ಇಟ್ಟುಕೊಳ್ಳಬೇಕೆಂಬ ಸಲಹೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಮಾಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಮಾನ್ಯ ಶ್ರೀ ಆರ್ಮುಗಂ ಆವರು ಹೇಳಿದ ಹಾಗೆ ಈ ಇನ್‌ಸ್ಟಿಟ್ಯೂಟ್ ಒಂದು ಯೂನಿವರ್ಸಿಟಿಯಂತೆ ಇದೆ. ಇದರಲ್ಲಿ ಯಾವುದೋ ಒಂದೇ ಜಾತಿಯವರನ್ನು ಸೇರಿಸಿಕೊಂಡಿದ್ದಾರೆ. ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಉತ್ತೇಜನ ರೂಪವಾಗಿ ಗೌರವವಾಗಿ ಇದಕ್ಕೆ ಕೊಡುತ್ತಿದ್ದಾರೆ. ಹಾಗಿರುವಾಗ ಒಂದೇ ಜಾತಿಯವರನ್ನು ನೇಮಕಮಾಡಿಕೊಂಡಿರುವುದು ಸಮಾಜಕ್ಕೇ ರಾಷ್ಟ್ರಕ್ಕೇ ವಿರೋಧವಾಗಿದೆ. ಅಲ್ಲಿ ನಿಮ್ಮ ಪಂಗಡಗಳಿಗೆ ಅವಕಾಶವಿಲ್ಲ. ಯಾವ ವಿಧದಲ್ಲಿಯೂ ಇಂತಹ ಸಂಸ್ಥೆಗಳಿಗೆ ಉತ್ತೇಜನವನ್ನು ಕೊಡಬಾರದೆಂದು ನಾನು ಒತ್ತಾಯಪೂರ್ವಕವಾಗಿ ಹೇಳಿದ್ದೇನೆ, ಆದ್ದರಿಂದ ಈ ವಿಚಾರವಾಗಿ ಸರ್ಕಾರದವರು ಏನು ಮಾಡುತ್ತಾರೆಂಬುದನ್ನು ಹೇಳಬೇಕು.

ಶ್ರೀ ಎ.ಆರ್. ಬದರೀನಾರಾಯಣ್.—ಮಾನ್ಯ ಶ್ರೀ ಆರ್ಮುಗಂ ಆವರು ಈ ಒಂದು ಸಂಸ್ಥೆ ಏನಿದೆ ಇದನ್ನು ಪ್ಯಾರಲರ್ ಯೂನಿವರ್ಸಿಟಿ ಎಂದು ಹೇಳಿ ಇದನ್ನು ಯಾರಿಗೋ ಒಬ್ಬರಿಗೋನ್ಕರ ಮಾಡಿದ್ದಾರೆಂದು ಹೇಳಿದರು. ಅದು ಒಂದು ಸೊಸೈಟಿಯಾಗಿ ರಿಜಿಸ್ಟರ್ ಆಗಿದೆ. ಆ ಸೊಸೈಟಿಯಲ್ಲಿ ವಿ. ಕೆ. ಆರ್. ವಿ. ರಾವ್ ಅವರೇ ಡೈರೆಕ್ಟರ್ ಆಗಿದ್ದಾರೆ. ಅಲ್ಲಿ ಒಂದು ಆಡ್ವೈಜರಿ

ಕಮಿಟಿ ಇದೆಯೆಂದು ಹೇಳಿದರು. ಅದು ಸಾರ್ವಜನಿಕ ಸ್ವತ್ತು. ಅದು ಯಾರಿಗೂ ವೈಯಕ್ತಿಕವಾದ ಸ್ವತ್ತಲ್ಲ. ಇದಕ್ಕೆ ಏನು ನಿರ್ಬಂಧ ಹಾಕಬಹುದು, ಯಾರು ಯಾರು ಅಲ್ಲಿದ್ದಾರೆಂಬುದನ್ನು ತಿಳಿದು ಏನು ಲೋಪದೋಷಗಳಾಗಿವೆ ಎಂಬ ಬಗ್ಗೆ ಯೋಚನೆ ಮಾಡಿ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು. ಅದೂ ಅಲ್ಲದೆ ಇಂತಹ ಇನ್‌ಸ್ಟಿಟ್ಯೂಷನ್‌ಗಳು ಆಗುವುದು ಒಳ್ಳೆಯದೇ ಅಲ್ಲವೇ ಎಂಬುದನ್ನು ಈಗ ಇನ್ನೂ ಯೋಚನೆ ಮಾಡಬೇಕು.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ನಾನು ಅಂತಹ ಒಳ್ಳೆಯ ಇನ್‌ಸ್ಟಿಟೂಷನ್ಸ್‌ನ್ನು ಮಾಡಬೇಡಿ ಎಂಬುದಾಗಿ ಹೇಳುವುದಿಲ್ಲ. ಅವರು ಹೇಳುವ ಸೋಷಿಯಲ್ ಚೇಂಜ್, ಇಕನಾಮಿಕ್ ಚೇಂಜ್, ಪರಿಶುದ್ಧವಾಗಿ ಇದೆಯೇ ಇಲ್ಲವೇ ಎಂಬ ಬಗ್ಗೆ ಜನರು ನಾನಾ ರೀತಿಯಲ್ಲಿ ಅಭಿಪ್ರಾಯ ಕೊಡುತ್ತಿದ್ದಾರೆ. ಆ ಬಗ್ಗೆ ಒಂದು ಭಿನ್ನಾಭಿಪ್ರಾಯವಿದ್ದರೂ ನಾನು ಹೇಳಿದ ಹಾಗೆ ಅಂತಹ ಒಂದು ಮೂಲಭೂತವಾದ ಉದ್ದೇಶವನ್ನು ಇಟ್ಟುಕೊಂಡು ಈ ಸಂಸ್ಥೆಯನ್ನು ಸ್ಥಾಪನೆ ಮಾಡುವುದಾದರೆ ಅದರಿಂದೇನು ಪರಿಣಾಮವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಎ. ಆರ್. ಬದರೀನಾರಾಯಣ್.—ಇದು ಒಂದು ದೇವಾಲಯ ಇದ್ದಹಾಗೆ ಇದೆ. ಏಕೆಂದರೆ ಅಲ್ಲಿ ಎಲ್ಲರಿಗೂ ಪ್ರವೇಶವಿದೆ. ನಾವೂ ಪ್ರವೇಶ ಮಾಡೋಣ. ಆಮೇಲೆ ಸರ್ಕಾರದಿಂದ ಏನು ಬೇಕಾದರೂ ಅದರ ಬಗ್ಗೆ ನಿರ್ಬಂಧವನ್ನು ಹಾಕೋಣ.

ಶ್ರೀ ಕೆ. ಪ್ರಭಾಕರ್.—ದೇವಾಲಯಗಳನ್ನು ನಿರ್ಮಾಣ ಮಾಡತಕ್ಕ ಕಾಲ ಬಂದಿರುವುದರಿಂದ, ಮಾನವ ದೇವಾಲಯ ಮಾಡುವಂಥಾದ್ದಕ್ಕೆ ಸಾಧ್ಯವೆ ಎಂಬುದನ್ನು ನೋಡಿ ಮಾಡೋಣವೇ ?

ಶ್ರೀ ಎ. ಆರ್. ಬದರೀನಾರಾಯಣ್.—ಆಯಿತು ಮಾಡೋಣ.

ಶ್ರೀ ಕೆ. ಪ್ರಭಾಕರ್.—ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸರ್ವಿಸ್ ಎನ್ನುವುದನ್ನು ಈ ದೇಶದಲ್ಲಿ ಸೈಂಟಿಫಿಕ್ಕಾಗಿ ಮಾಡಬೇಕು. ಎಲ್ಲಾ ಕಡೆಯೂ ಅದರ ಬಗ್ಗೆ ಬಹಳವಾಗಿ ನಿಗಾ ಕೊಡುತ್ತಾರೆ. ನಮ್ಮಲ್ಲಿಯೂ ಅಂಥಾದ್ದು ಇದೆ. ಅದು ಸ್ಟ್ಯಾಂಡರ್ಡ್ ಆಗಿಲ್ಲ. ಅದರ ಕಡೆಗೆ ಸರ್ಕಾರದವರು ಹೆಚ್ಚಿಗೆ ಗಮನ ಕೊಡಬೇಕು. ನಮ್ಮಲ್ಲಿ ಮಾನವ ಸಮಾಜ ಒಂದಾಗಬೇಕೆಂಬುದೇ ನಮ್ಮ ಕಲ್ಯಾಣ ಸಮಾಜದ ಗುರಿಯಾಗಿದೆ. ಇಲ್ಲದಿದ್ದರೆ ಸಮಾಜದ ಅರಿವು ಇಲ್ಲದ ಜನರು ಇಂತಹ ಸಂಸ್ಥೆಗಳನ್ನು ಮಾಡುವುದಕ್ಕೆ ಹೋದರೆ ಮುಂದೆ ಇನ್ನೆಂಥ ಸಮಾಜ ಹುಟ್ಟುತ್ತದೋ ಎಂಬುದನ್ನು ನೋಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಈ ದೇಶದಲ್ಲಿ ಸಾಮಾಜಿಕ ಕ್ರಾಂತಿಯ ಬಗ್ಗೆ ಯಾರೂ ಸಲಹೆ ಕೊಟ್ಟಿಲ್ಲ. ಆ ರೀತಿ ಕೊಟ್ಟವರಲ್ಲಿ ಮಾನ್ಯ ಶ್ರೀ ವಿ. ಕೆ. ಆರ್. ವಿ. ರಾವ್ ಒಬ್ಬರೆಂದು ಕಾಣುತ್ತದೆ. ಮಾನ್ಯ ಶ್ರೀ ಬಸವಲಿಂಗಪ್ಪನವರು ಯೂನಿವರ್ಸಿಟಿಯಲ್ಲಿ ಭಾಷಣ ಮಾಡುವಾಗ ಇದರ ಬಗ್ಗೆ ಒಂದು ಅಭಿಪ್ರಾಯವನ್ನು ಕೊಟ್ಟರು. ಇದರ ಸಾರಾಂಶವೇನು ?

ಶ್ರೀ ಟಿ. ಎಂ. ಮಂಜುನಾಥ.—ಚಿಕ್ಕನಾಯಕನಹಳ್ಳಿಯಲ್ಲಿ ಒಂದು ಕಾಲೇಜನ್ನೂ ಸಹ ಕೊಟ್ಟಿಲ್ಲ. ತಿಪಟೂರ್ ತಾಲ್ಲೂಕಿನಲ್ಲಿ ಮಾತ್ರ ಕೊಟ್ಟಿದ್ದಾರೆ. ಕೊಪ್ಪಳದಲ್ಲಿಯೂ ಒಂದು ಕಾಲೇಜನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎ. ಆರ್. ಬದರೀನಾರಾಯಣ್.—ಮಾನ್ಯ ಶ್ರೀ ಲಿಂಗಪ್ಪನವರು ಯೂಟಿಲೈಜೇಷನ್ ಆಫ್ ಸರ್ವೀಸಸ್ ಆಫ್ ದಿ ಟೀಚರ್ಸ್ ವಿಷಯವಾಗಿ ಮಾತನಾಡಿದರು. ಅದರ ಸಲಹೆಯ ಪ್ರಕಾರ ಎಲ್ಲ ಕೆಲಸಗಳನ್ನು ಮಾಡುತ್ತಿದ್ದೇವೆ. ಸಾಧಾರಣವಾಗಿ ಹಳ್ಳಿಯಲ್ಲಿರುವ ಒಂದು ಸ್ಕೂಲನ್ನು ಉದಾಹರಣೆಯಾಗಿ ತೆಗೆದುಕೊಂಡು ಹೇಳುವುದಾದರೆ, ಆ ಸ್ಕೂಲು ಒಂದು ಒಳ್ಳೆಯ ಜಾಗ, ಒಂದು ಸಂಸ್ಕೃತಿ ಕೇಂದ್ರ, ಉಪಾಧ್ಯಾಯರು ಅದರ ಮುಖ್ಯಸ್ಥರೆಂಬುದಾಗಿ ಇಟ್ಟುಕೊಂಡಿರುವಾಗ ಆ ಒಂದು ಹಳ್ಳಿಯ ಪ್ರಗತಿಯ ಬಗ್ಗೆ ಹಾಗೂ ಅದರ ಒಂದು ಭವಿಷ್ಯದ ಬಗ್ಗೆ, ಅಲ್ಲಿಯ ಎಲ್ಲಾ ಚಟುವಟಿಕೆಗಳ ಬಗ್ಗೆ ಬರೀ ಪಾಠಗಳನ್ನು ಹೇಳುವುದು ಮಾತ್ರವಲ್ಲ, ಆ ಹಳ್ಳಿಯಲ್ಲಿರುವ ಎಲ್ಲಾ ವಿಚಾರಗಳನ್ನೂ ಅಲ್ಲಿನ ಉಪಾಧ್ಯಾಯರೇ ಗಮನಿಸಬೇಕು. ಅವರೂ ಸಹ ಅದರಲ್ಲಿ ಪಾರ್ಟಿಸಿಪೇಟ್ ಮಾಡಬೇಕು. ಸೋಷಿಯಲ್ ಆಕ್ಟಿವಿಟೀಸ್ ಬಗ್ಗೆ ಶಿಕ್ಷಕರು ಸ್ವಲ್ಪ ಆಸಕ್ತಿಯನ್ನು ವಹಿಸಲಿ. ಇದನ್ನು ಎಲ್ಲರೂ ಒಪ್ಪುವ ವಿಚಾರವಾಗಿರುವುದರಿಂದ ಆ ರೀತಿಯಲ್ಲಿಯೇ ಮುಂದೆ ಏರ್ಪಾಡು ಮಾಡಲಾಗುತ್ತದೆ. ಇನ್ನು ಸಂಡೂರಿನಲ್ಲಿರತಕ್ಕ ಪ್ರೈವೇಟ್ ಹೈಸ್ಕೂಲಿನಲ್ಲಿ ಬಹಳ ಹೈರೇಟ್ ಫೀ ಹಾಕುತ್ತಿದ್ದಾರೆಂದು ಹೇಳಿದ್ದಾರೆ. ಅದು ರೆಸಿಡೆನ್ಷಿಯಲ್ ಸ್ಕೂಲು. ಅಲ್ಲಿ ಊಟ, ಬಟ್ಟೆ ಅಂದರೆ ಯೂನಿಫಾರಂ ಮತ್ತು ಪುಸ್ತಕ ಇತ್ಯಾದಿಗಳೆಲ್ಲಾ ಅದರಲ್ಲಿ ಸೇರುತ್ತವೆ. ಅದುದರಿಂದ

(ಶ್ರೀ ಎ. ಆರ್. ಬದರೀನಾರಾಯಣ್)

ಅದು ಜಾಸ್ತಿ ಕಂಡಹಾಗೆ ಕಾಣಬಹುದು. ಆದರೆ ಇಂಡಿಯಾ ದೇಶದಲ್ಲಿ ಕೇಂದ್ರ ಸರ್ಕಾರದವರ ಪಾಲಿಸಿಗನುಸಾರವಾಗಿ ಇಂಥಾ 70 ಕ್ಯಾಲಿಬರ್ ಶಾಲೆಗಳನ್ನು ತೆರೆಯಲಾಗಿದೆ. ಇವುಗಳಿಗೆ ಕೇಂದ್ರ ಸರ್ಕಾರದಿಂದ ಸ್ಕಾಲರ್‌ಷಿಪ್ ಇತರ ಫೆಸಿಲಿಟೀಸ್‌ಗಳನ್ನು ಕೊಡಲಾಗುತ್ತಿದೆ. ನಮ್ಮಲ್ಲಿ ಈ ರಾಮಕೃಷ್ಣ ವಿದ್ಯಾರ್ಥಿನಿಲಯ ಮತ್ತು ಆ ಸೈನಿಕ ಸ್ಕೂಲುಗಳು ಹೇಗೋ ಇದೂ ಹಾಗೇ. ಆದರೆ ಇಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ರಿಜರ್ವೇಷನ್‌ಗೆ ಬಹಳ ಕಷ್ಟ. ಅಂದಾಗ ಅಲ್ಲಿ ಬಡವರ ಮಕ್ಕಳು ಹೋಗಿ ಅಭ್ಯಾಸಮಾಡುವುದು ಬೇಡವೇ ಎಂದು ಕೇಳಿಬಹುದು. ಅದು ಬಹಳಮಟ್ಟಿಗೆ ಕೇಂದ್ರದ ಸ್ಕಾಲರ್‌ಷಿಪ್ ಮತ್ತು ಇತರೇ ಸಹಾಯಧನಗಳ ಮೇಲೆ ನಡೆಯುತ್ತಿದೆ. ಅದು ಬೋರ್ಡಿಂಗ್ ಸ್ಕೂಲಲ್ಲ. ಆದ್ದರಿಂದ ಅದನ್ನು ಬೇಡ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್. —ಇದು ಇಂಥಾ ಕ್ಯಾಲಿಬರ್ ಶಾಲೆಗೆ ಸೇರತಕ್ಕ ಪಾಠಶಾಲೆ ಎಂದು ಕೇಂದ್ರಕ್ಕೆ ಶಿಫಾರ್ಸು ಮಾಡತಕ್ಕವರು ಯಾರು ?

ಶ್ರೀ ಎ. ಆರ್. ಬದರೀನಾರಾಯಣ್. —ಇನ್ನು ಕನ್ನಡ ಮಾಧ್ಯಮ ಶಾಲೆಗಳಿಗೆ, ಖಾಸಗಿಯವರು ನಡೆಸುತ್ತಿರುವ ಶಾಲೆಗಳಿಗೆ ಗ್ರಾಂಟ್ ಇನ್ ಎಯಿಡ್ ಕೊಡಿತ ಪ್ರಕಾರ ಗ್ರಾಂಟನ್ನು ಕೊಡುತ್ತಿಲ್ಲ ಎಂಬ ಹೇಳಿದ್ದಾರೆ. ಸರ್ಕಾರದವರು ಕನ್ನಡ ಮಾಡಿಯಂನ್ನು ಎಲ್ಲಾ ಕಡೆಯೂ ಖಾಯಿಗೆ ತರಬೇಕೆಂದು ತೀರ್ಮಾನ ಮಾಡಿಕೊಂಡಿರುವುದರಿಂದ ಇದಕ್ಕೆ ಪ್ರೋತ್ಸಾಹ ಕೊಡತಕ್ಕ ವಿಚಾರದಲ್ಲಿ ಎಂದೂ ಹಿಂದೆ ಸರಿಯುವುದಿಲ್ಲ.

ಆದರೆ ಕೆಲವರು ಮಿಡ್ ಡೇ ಮೀಲ್ಸ್ ವಿಚಾರ ಕೇಳಿದ್ದಾರೆ. ಇದನ್ನು ರಾಜ್ಯದಲ್ಲಿ ಇರತಕ್ಕ ಎಲ್ಲಾ ಶಾಲೆಗಳಿಗೂ ವಿಸ್ತರಿಸುವುದಕ್ಕೆ ಕಷ್ಟಸಾಧ್ಯವಾಗುತ್ತದೆ. ಆದರೆ ಇದರ ಪ್ರಮಾಣವನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನ ಮಾಡುವುದಾಗಿ ತಿಳಿಸಲು ಇಚ್ಛಿಸುತ್ತೇನೆ.

ಇನ್ನು ಲಂಗ್ವಿಸ್ಟಿಕ್ ಮೈನಾರಿಟಿ ಮಕ್ಕಳಿಗೆ ಶಾಲೆಗಳನ್ನು ಒದಗಿಸಬೇಕೆಂದು ಹೇಳಿದ್ದಾರೆ. ಸರ್ಕಾರದವರು ಈ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾರೆಂದು ಹೇಳುತ್ತೇನೆ. ಇನ್ನು ಕೆಲವು ಸದಸ್ಯರು ರಾಜ್ಯದ ಕೆಲವು ಭಾಗದಲ್ಲಿ ಉಪಾಧ್ಯಾಯರು ಅಧಿಕ ಸಂಖ್ಯೆಯಲ್ಲಿದ್ದಾರೆಂದು ಹೇಳಿದ್ದಾರೆ. ಕೆಲವು ಕಡೆ ವಿರಳವಿದೆ. ಅದಕ್ಕೆ ಕಾರಣ ಹಿಂದೆ ಅಲ್ಲಿ ಡಿಸ್ಟ್ರಿಕ್ಟ್ ಬೋರ್ಡ್‌ಗಳ ಆಡಳಿತವಿದ್ದ ಕಾಲಕ್ಕೆ ಆಗ್ಗೆ ಅಲ್ಲಿ ನೇಮಕ ಮಾಡಿಕೊಂಡಿದ್ದಂಥ ಜನರ ಸಂಖ್ಯೆ ಸ್ವಲ್ಪ ಜಾಸ್ತಿಯಾಗಿತ್ತು. ಅದನ್ನು ಸರಿಪಡಿಸುವುದಕ್ಕೆ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಇನ್ನು ಕೆಲವು ಮಾನ್ಯ ಸದಸ್ಯರು ಖಾಸಗೀ ಶಾಲೆಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವಿದ್ಯಾರ್ಥಿಗಳಿಗೆ ಫೀಜನ್ನು ವಿಧಿಸುತ್ತಿದ್ದಾರೆ, ಅದನ್ನು ತಪ್ಪಿಸಬೇಕೆಂದು ಹೇಳಿದ್ದಾರೆ. ಅದನ್ನು ಹೇಗೆ ನಿರ್ಬಂಧ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

ಇನ್ನು ಕೆಲವು ಮಾನ್ಯ ಸದಸ್ಯರು ಉಪಾಧ್ಯಾಯ ವೃತ್ತಿಯಲ್ಲಿರತಕ್ಕವರು ಬೇರೆ ಕೆಲಸ ಕಾರ್ಯಗಳಲ್ಲಿ ನಿರತರಾಗುತ್ತಿದ್ದಾರೆ, ಅದನ್ನು ತಪ್ಪಿಸಬೇಕೆಂದು ಹೇಳಿದ್ದಾರೆ, ನಿಜ, ಉಪಾಧ್ಯಾಯರ ವೃತ್ತಿಯಲ್ಲಿರತಕ್ಕ ಜನರು ಬೇರೆ ಹವ್ಯಾಸಗಳಲ್ಲಿ ತೊಡಗಬಾರದು. ಅದನ್ನು ತಪ್ಪಿಸತಕ್ಕ ಬಗ್ಗೆ ಸರ್ಕಾರದವರು ಏನಾದರೂ ಕ್ರಮತೆಗೆದುಕೊಂಡರೆ— ಅದಕ್ಕೆ ರುಜುಪಾತು ಮಾಡಿ ಎಂದು ಕೇಳುತ್ತಾರೆ, ಕಡೆಗೆ ಕೋರ್ಟುಗಳನ್ನೂ ಪತ್ತುತ್ತಾರೆ. ಆದರೆ ಒಟ್ಟಿನಲ್ಲಿ ಅವರು ಅನ್ಯಥಾ ಕೆಲಸಗಳಲ್ಲಿ ತೊಡಗಬಾರದೆಂಬುದೇ ಸರ್ಕಾರದವರ ಇಚ್ಛೆ ಕೂಡ.

ಇನ್ನು ಮಾನ್ಯ ಹಮೀದ್ ಷಾ ಅವರು ಉರ್ದು ಮತ್ತು ಮರಾಠಿ ಭಾಷೆಗಳಿಗೂ ಉತ್ತೇಜನ ಕೊಡಬೇಕೆಂದು ಶ್ರೀ ಸ್ಟೈನಕ್ ಅವರು ಹೇಳಿದ್ದಾರೆ. ಇವಗಳಲ್ಲಿರತಕ್ಕ ನ್ಯೂನತೆಗಳನ್ನು ಖಂಡಿತ ಸರ್ಕಾರದವರು ಸರಿಪಡಿಸುತ್ತಾರೆಂದು ಹೇಳುತ್ತೇನೆ. ಎಲ್ಲ ಭಾಷೆಗಳಿಗೂ ಪ್ರೋತ್ಸಾಹ ನೀಡಿ ಅವುಗಳನ್ನು ಉತ್ತಮಪಡಿಸಬೇಕೆಂಬುದೇ ಸರ್ಕಾರದವರ ನೀತಿ.

ಇನ್ನು ಶ್ರೀಮಾನ್ ಭೈರಪ್ಪಾಜಿಯವರು ಖಾಸಗೀ ಶಾಲೆಗಳಿಗೆ ಪ್ರಾರಂಭಮಾಡುವುದಕ್ಕೆ ಮೊದಲು ೫ ವರ್ಷಗಳ ಗ್ಯಾರಂಟನ್ನು ಮುಂಗಡವಾಗಿ ಇಡಬೇಕೆಂದಿತ್ತು, ಅದನ್ನು ಮೂರು ವರ್ಷಕ್ಕೆ ಇಳಿಸಬೇಕೆಂದು ಕೇಳಿದ್ದಾರೆ. ಹಾಗೆ ಇಳಿಸಬೇಕಾದ್ದು ಉತ್ತಮ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಆದರೆ ಇದನ್ನು ಹಣಕಾಸಿನ ದೃಷ್ಟಿಯಿಂದಲೂ ಪರಿಶೀಲಿಸಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲವು ಖಾಸಗೀ ಶಾಲೆಗಳವರು ತಮ್ಮ ಅಡ್ಮಿನಿಸ್ಟ್ರೇಷನ್ ಕಮಿಟಿಯಲ್ಲಿ ಪ್ರಭಾವಶಾಲಿಗಳಾದ ಜನರನ್ನು ಹಾಕಿಕೊಂಡು – ಅಂದರೆ ಮಾನ್ಯ ಮುಖ್ಯಮಂತ್ರಿಗಳಂಥವರ ಅಳಿಯಂದಿರನ್ನು ಕಮಿಟಿಗಳಲ್ಲಿ ಹಾಕಿಕೊಂಡು ಕೆಲಸ ಮಾಡುತ್ತಿರುವುದರಿಂದ ಸರ್ಕಾರದವರು ಈಗ ನೇಮಕ ಮಾಡಿರತಕ್ಕ ಒನ್ ಮ್ಯಾನ್ ಕಮಿಷನ್ ವರದಿ ಏನೂ ಅನುಕೂಲ ಮಾಡಲಾರದು ಎಂಬುದು ತಮಗೆ ಗೊತ್ತಾಗಿದೆಯೇ?

ಶ್ರೀ ಎ. ಪಿರ್. ಬದರೀನಾರಾಯಣ್. – ನಾವು ಏನು ಮಾಡುವುದಕ್ಕಾಗುತ್ತದೆ? ಇದರಲ್ಲಿ ಎರಡು ಮುಖ್ಯವಾದ ತೊಂದರೆಗಳಿವೆ. ಒಂದು ನಾವು ಆ ಸ್ಕೂಲುಗಳನ್ನು ಡಿಟೆಕಾಗ್ನೈಜ್ ಮಾಡಬಹುದು. ಇದರಿಂದ ಅಲ್ಲಿ ಅಭ್ಯಾಸಮಾಡತಕ್ಕ ಮಕ್ಕಳಿಗೆ ತೊಂದರೆಯಾಗುತ್ತದೆ. ಇನ್ನು ಸರ್ಕಾರದವರು ಕೊಟ್ಟಿರತಕ್ಕ ಅನುಮತಿಯನ್ನು ವಿತ್‌ಡ್ರಾ ಮಾಡಿದರೆ ಅಲ್ಲಿ ಕೆಲಸ ಮಾಡುತ್ತಿದ್ದ ಉಪಾಧ್ಯಾಯರುಗಳಿಗೆ ತೊಂದರೆಯಾಗುತ್ತದೆ. ಹೀಗೆಲ್ಲಾ ತೊಂದರೆಗಳಿರುವುದರಿಂದ ಈ ವಿಚಾರದಲ್ಲಿ ಆ ಶಾಲೆಗಳ ಆಡಳಿತ ಗುತ್ತವರಿಗೆ ಸ್ವಲ್ಪ ಸರ್ಕಾರ ಇನ್ನೂ ಹೆಚ್ಚಿನ ಅಧಿಕಾರ ಇಟ್ಟುಕೊಂಡರೆ ಸರಿಹೋದೀತೇ ಎಂಬುದನ್ನೂ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಕೆ. ಶ್ರೀರಾಮುಲು.—ಈಗ ಖಾಸಗೀ ಶಾಲೆಗಳವರು ಕನ್ನಡ ಅಭ್ಯಾಸ ಮಾಡತಕ್ಕ ಮಕ್ಕಳಿಗೆ ಅಲ್ಲಿ ಪಾಠ ಹೇಳುವುದನ್ನು ಮೂರನೇ ತರಗತಿಗೇ ನಿಲ್ಲಿಸಿ, ಅವರನ್ನು ಮುಂದಿನ ವಿದ್ಯಾಭ್ಯಾಸಕ್ಕೆ ಬೇರೆ ಶಾಲೆಗಳಿಗೆ ಹೋಗಬೇಕೆಂದು ಹೇಳುತ್ತಿದ್ದಾರೆ. ಆದರೆ ಅದೇ ಸ್ಕೂಲುಗಳಲ್ಲಿ 7ನೇ ತರಗತಿ ವರೆಗೆ ಇಂಗ್ಲೀಷ್ ಮತ್ತು ತಮಿಳು ಪಾಠಗಳನ್ನು ನಡೆಸುತ್ತಿದ್ದಾರೆ. ನಾವು ಕನ್ನಡಕ್ಕೆ ರಾಜ್ಯದಲ್ಲಿ ಹೆಚ್ಚಿನ ಉತ್ತೇಜನ ಕೊಡಬೇಕೆಂದು ಹೇಳುತ್ತಿರುವಾಗ ಇವರು ಹಾಗೆ ಮಾಡುವುದು ಸರಿಯಿಲ್ಲ. ಆದುದರಿಂದ ಸರ್ಕಾರಿ ಶಾಲೆಗಳಲ್ಲಿ ಹೇಗೆ ಪಾಠಪ್ರವಚನಗಳು ನಡೆಯುತ್ತಿವೆಯೋ ಈ ಖಾಸಗೀ ಶಾಲೆಗಳಲ್ಲೂ ಕೂಡ ಅದೇ ಮಾದರಿಯಲ್ಲಿ ಪಾಠಪ್ರವಚನಗಳು ನಡೆಯುವುದಕ್ಕೆ ಸರ್ಕಾರದವರು ಏಕೆ ಅವರಿಗೆ ಡೈರೆಕ್ಷನ್ ಕೊಡಬಾರದು?

ಶ್ರೀ ಎ. ಆರ್. ಬದರೀನಾರಾಯಣ.—ಈ ವಿಚಾರದಲ್ಲಿ ಕಾರ್ಯಕ್ರಮ ಕೈಕೊಳ್ಳಲಾಗಿದೆ. ಇದು ಗಹನವಾದ ವಿಚಾರ, ಸಾಧ್ಯವಾದ ಪ್ರಯತ್ನ ಮಾಡುತ್ತೇವೆ.

10-30 A.M.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಕನ್ನಡ ಮತ್ತು ತೆಲುಗು ಭಾಷೆಗಳಿಗೆ ಕಾಮನ್ ಲಿಪಿ ಇರುವ ವಿಷಯದಲ್ಲೇನು ಮಾಡುತ್ತೀರಿ?

ಶ್ರೀ ಎ. ಆರ್. ಬದರೀನಾರಾಯಣ್.—ಇದು ಬಹಳ ದೊಡ್ಡ ವಿಷಯ, ಸಮುದ್ರ ಇದ್ದಹಾಗಿದೆ. ಇದು ನಿಧಾನವಾಗಿ ಯೋಚನೆ ಮಾಡಬೇಕಾದ ವಿಚಾರ.

ಮಾನ್ಯ ಸದಸ್ಯರು ಹೆಚ್ಚಿನ ಅನುಕೂಲತೆ ಕೊಡುವ ವಿಚಾರ ಹೇಳಿದರು, ಈಗ ಹೆಚ್ಚು ಹಣ ಒದಗಿಸಲಾಗಿದೆ, ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಹೆಚ್ಚು ಕೊಡುತ್ತೇವೆ. ಫ್ರೀಲಟಿಕರ್ ಸಫರರ್ಸ್‌ಗೆ ಹೆಚ್ಚು ಸೌಲಭ್ಯ ಕೊಡಬೇಕು ಎಂದು ಹೇಳಿದ್ದಾರೆ, ಈಗಾಗಲೆ ಕೊಡುತ್ತಿದೆ, ಹೆಚ್ಚಾಗಿ ಕೊಡುವ ವಿಚಾರ ಪರಿಶೀಲಿಸುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚು ಉಪಾಧ್ಯಾಯರನ್ನು ನೇಮಕಮಾಡಬೇಕೆಂದು ಶ್ರೀ ಕೊಡಗಯವರು ಹೇಳಿದರು, ಈಗಾಗಲೆ ಕೊಡಲಾಗಿದೆ, ಇನ್ನೂ ಹೆಚ್ಚು ಕೊಡಲು ಪ್ರಯತ್ನ ಮಾಡುತ್ತೇವೆ. ಪದವೀಧರ ಉಪಾಧ್ಯಾಯರ ವಿಚಾರ ಹೇಳಿದರು. ಈಗ ಒತ್ತಾಯ ಮಾಡುವುದು ಸರಿಯಲ್ಲ. ನಪರೇಟ್ ಚಾರ್ಜಿನ ವಿಚಾರ ಹೇಳಿದರು, ನಮ್ಮಲ್ಲೇ ಒಂದು ಸೆಲ್ ಮಾಡುವುದನ್ನು ಯೋಚನೆ ಮಾಡಬಹುದು. ಕಾಲೇಜುಗಳಿಗೆ ಹೆಚ್ಚು ಖರ್ಚು ಮಾಡುವುದು ಬೇಡ, ಹೆಚ್ಚು ಮಕ್ಕಳನ್ನು ವಿದ್ಯಾವಂತರನ್ನು ಮಾಡಲು ಪ್ರಯತ್ನ ಮಾಡಬೇಕು ಎಂದು ಸಲಹೆ ಮಾಡಿದ್ದಾರೆ. ಎಜುಕೇಷನ್‌ಗೆ ರೀ ಫೈನಾನ್ಸ್ ಕಾರ್ಪೋರೇಷನ್ ಮಾಡಿ ಅವರ ಮೂಲಕ ಕಾಲೇಜು ನಡೆಸಬೇಕು ಎಂದು ಹೇಳಿದ್ದಾರೆ, ಇದನ್ನು ವಿಚಾರ ಮಾಡಬೇಕು. ಉಪಾಧ್ಯಾಯನಿಯರನ್ನು ಹೆಚ್ಚಾಗಿ ನೇಮಕ ಮಾಡಬೇಕೆಂದು ತಿಳಿಸಿದಾರೆ, ಅದರಿಂದ ಒಳ್ಳೆಯದಾಗಬಹುದೆಂದು ಹಾಗೆ ಹೇಳುತ್ತಿದ್ದಾರೆ, ಅವರು ಸಿಸ್ಟೆಮ್ಯಾಟಿಕ್ ಆಗಿ ಕೆಲಸ ಮಾಡುವರು ಎಂಬ ಅಭಿಪ್ರಾಯವಿದೆ. ಆದರೆ ಹಳ್ಳಿಗಳಿಗೆ ಹೆಣ್ಣುಮಕ್ಕಳು ಹೋದರೆ ಕಷ್ಟವಾಗಬಹುದು, ಅಲ್ಲಿ ಮನೆ ಸಿಕ್ಕುವುದಿಲ್ಲ, ತೊಂದರೆಯಾಗುವುದು. ಅದಷ್ಟುವರೆಗೆ ಸರಕಾರ ಈ ವಿಚಾರಕ್ಕೆ ಗಮನ ಕೊಡಬಹುದು ಎಂದು ಕಾಣುತ್ತದೆ.

(ಶ್ರೀ ಎ. ಆರ್. ಬದರೀನಾರಾಯಣ್)

ಹುಬ್ಬಳ್ಳಿ-ಧಾರವಾಡದಲ್ಲಿ ಶಾಲಾ ಕಟ್ಟಡಗಳ ರಿಪೇರಿ ಮಾಡಬೇಕೆಂದು ತಿಳಿಸಿದ್ದಾರೆ, ಅದನ್ನು ಮಾಡಿಸುತ್ತೇವೆ. ಉರ್ದು ಭಾಷೆಗೆ ಸಂಬಂಧಪಟ್ಟಂತೆ ಇನ್‌ಸ್ಪೆಕ್ಟಿಂಗ್ ಆಫೀಸರುಗಳು ಬೇಕೆಂದು ಸೂಚಿಸಿದ್ದಾರೆ, ಅದನ್ನು ಗಮನಿಸುತ್ತೇವೆ. ಮರಾಠಿ ಪ್ರದೇಶದ ಬಾರ್ಡರಿನಲ್ಲಿ ನೇಮಕದ ವಿಚಾರ ಹೇಳಿದ್ದಾರೆ ಶ್ರೀ ಸ್ವೈನರ್‌ರವರು. ಡಿ.ಎಲ್.ಆರ್.ಸಿ.ಯಲ್ಲಿ ಸೆಲೆಕ್ಷನ್ ಮಾಡಿ ಬೇಗ ನೇಮಕ ಮಾಡುತ್ತೇವೆ. ಟೈಪ್‌ರೈಟಿಂಗ್ ಇನ್‌ಸ್ಟಿಟ್ಯೂಟ್ ವಿಚಾರ ಹೇಳಿದರು. ಅದನ್ನು ಮಾಡಲು ಇರಾಖೆ ಅಬ್‌ಜೆಕ್ಷನ್ ಮಾಡಿಲ್ಲ, ಅದಕ್ಕೆ ಸಹಾಯ ಮಾಡೋಣ, ಅದರ ಬಗ್ಗೆ ಸ್ಪೆಷಲ್ ಕೇಸ್ ಆಗಿ ಸರಕಾರಕ್ಕೆ ಶಿಫಾರಸು ಮಾಡಲಾಗಿದೆ, ಅದನ್ನು ಮಾಡಲಾಗುವುದು. ಮಿಡ್ ಡೇ ಮೀಲ್ಸ್ ವಿಚಾರಕ್ಕೆ ಸಂಬಂಧಪಟ್ಟಹಾಗೆ ಖಾನಾಪುರ ಮತ್ತು ಬೆಳಗಾಂಗಳಲ್ಲಿ ಆದರ ನ್ಯೂನತೆ ವಿಚಾರ ತಿಳಿಸಿದರು, ಈಗಾಗಲೆ ವರ್ಲ್ಡ್ ಫುಡ್ ಪ್ರೋಗ್ರಾಂ ಪ್ರಕಾರ ಮತ್ತು ಕೇರ್ ಸಂಸ್ಥೆ ಪ್ರೋಗ್ರಾಂ ಪ್ರಕಾರ ಅವಕಾಶ ಮಾಡಿರುವುದರಲ್ಲಿ ಅನುಮರ್ಪಕತೆ ಕಂಡುಬಂದರೆ ಅದನ್ನು ತಿದ್ದುವುದಕ್ಕೆ ಪ್ರಯತ್ನ ಮಾಡುತ್ತೇವೆ. ಶ್ರೀ ಬೈರಪ್ಪಾಜಿಯವರು (ಗ್ರಾಚ್ಯುಟಿ ಕೊಡುವ ವಿಷಯದಲ್ಲಿ) 5 ರಿಂದ 3 ವರ್ಷಕ್ಕೆ ಇಳಿಸಬೇಕೆಂದು ಹೇಳಿದರು, ಆ ಬಗ್ಗೆ ಅಭಿಪ್ರಾಯ ತಿಳಿಸಿದ್ದೇನೆ. ಸಿಂಗಲ್ ಟೀಚರ್ ಶಾಲೆಗಳನ್ನು ಮಜಾ ಮಾಡಬೇಕು ಎಂದು ಹೇಳಿದ್ದಾರೆ, ಮಾಡುವುದಕ್ಕಾಗುವುದಿಲ್ಲ. ಅವು ಇರಬೇಕು. ವಿದ್ಯಾರ್ಥಿಗಳ ಸಂಖ್ಯೆ 40ಕ್ಕೆ ಜಾಸ್ತಿಯಿದ್ದರೆ ಹೆಚ್ಚು ಉಪಾಧ್ಯಾಯರನ್ನು ಕೊಡಲಾಗಿದೆ. ಶ್ರೀ ನಾರಾಯಣದಾಸ್‌ರವರು ಅವರ ಗ್ರಾಮದಲ್ಲಿ ಉಪಾಧ್ಯಾಯರು ಕಡಮೆ ಇದ್ದಾರೆಂದು ಹೇಳಿದರು, ಮತ್ತು ಅವರು ಶಾಲೆಗೆ ಸರಿಯಾಗಿ ಬರುವುದಿಲ್ಲ, ಸರಿಯಾಗಿ ಪಾಠ ಹೇಳುವುದಿಲ್ಲ, ರಾಜಕೀಯ ಮಾಡುವರು ಎಂದೂ ಹೇಳಿದರು. ಆ ವಿಚಾರದಲ್ಲಿ ವರ್ಗ ಮಾಡುವುದು ಮತ್ತಿತರ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ. ಅಕಾಮಡೇಷನ್ ವಿಚಾರ ಪ್ರಸ್ತಾಪಿಸಿದ್ದಾರೆ, ಅದಕ್ಕಾಗಲೆ ಉತ್ತರ ಹೇಳಿದೆ. ತಿಂಗಳುಪ್ಪದಲ್ಲಿ ಒಬ್ಬ ಉಪಾಧ್ಯಾಯರು ಕೆಲಸ ಬಹಳ ಲಘುವಾಗಿ ಮಾಡುತ್ತಿದ್ದಾರೆಂದು ತಿಳಿಸಿದರ , ಅವನ್ನು ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ರಾಜಕೀಯದಲ್ಲಿ ಪ್ರವೇಶ ಮಾಡುವವರನ್ನು ಹೊರಗೆ ಹಾಕಬೇಕೆಂದು ತಿಳಿಸಿದರು, ಅಂಥವರನ್ನು ವರ್ಗ ಮಾಡುತ್ತೇವೆ. ಶಿರಗುಪ್ಪದಲ್ಲಿ ಫರ್ಸ್ಟ್ ಗ್ರೇಡ್ ಕಾಲೇಜನ್ನು ಮಾಡಬೇಕೆಂದು ಹೇಳಿದರು, ಅದನ್ನು ಗಮನಿಸಲಾಗುವುದು. ಶ್ರೀ ಗುರುಸಿದ್ದಪ್ಪನವರು ಒಳ್ಳೆಯ ರಿಫಾರ್ಮ್ಸ್ ಮಾಡಿದ್ದಾರೆಂದು ಹೇಳಿದರು, ಒಳ್ಳೆಯ ಕೆಲಸ ಮಾಡಿರುವುದನ್ನು ಕೇಳಿದರೆ ತೃಪ್ತಿಯಾಗುವುದು. ಏನೂ ಮಾಡಿಲ್ಲವೆಂದರೆ ಹೇಗೆ? ಇರುವ ಅವಕಾಶದಲ್ಲಿ ಸಾಧ್ಯವಾದಷ್ಟು ಮಾಡಲಾಗಿದೆ. ಇದನ್ನು ಗಮನಿಸಬೇಕು. ಒಳ್ಳೆಯದು ಆಗಬೇಕು, ಐಡಿಯಲ್ ಕಂಡೀಷನ್ ಇದ್ದರೆ ಐಡಿಯಲ್ ಆಗಿರುವುದು. ಹಣ ಇರಬೇಕು, ಸಿಬ್ಬಂದಿ ಇರಬೇಕು. ಸಾಧ್ಯವಿರುವಷ್ಟು ಮಾಡುತ್ತಿದ್ದೇವೆ, ಅದನ್ನು ಮಾನ್ಯ ಸದಸ್ಯರು ಹೇಳಿರುವುದು ಸಂತೋಷವಾಗಿದೆ, ಅದಕ್ಕಾಗಿ ಅವರಿಗೆ ವಂದಿಸುತ್ತೇನೆ. ಸ್ಟ್ಯಾಂಡರ್ಡ್ ಬಹಳ ಕೆಳಗೆ ಇಳಿದಿದೆ, ಕ್ವಾಲಿಟಿ ಇಂಪ್ರೂವ್ ಮಾಡಬೇಕು ಎಂದು ತಿಳಿಸಿದ್ದಾರೆ. ಅದಕ್ಕೆ ಕಾರ್ಯಕ್ರಮ ಹಾಕಿಕೊಂಡಿದೆ. ಡಿಸಿಪ್ಲಿನ್ ಇರಬೇಕು ಎಂದು ಸೂಚಿಸಿದ್ದಾರೆ. ಅದು ಒಬ್ಬರಿಂದ ಆಗುವುದಿಲ್ಲ, ಅದಕ್ಕೆ ಎಲ್ಲರ ಸಹಕಾರ ಬೇಕು. ಹೊನ್ನೆ ಒಂದು ಶಾಲೆಗೆ ಹೋಗಿದ್ದೆ, ಅಲ್ಲಿ ಮಕ್ಕಳು ಚಪ್ಪಾಳೆ ಹೊಡೆದರು. ಈ ರೀತಿ ಮಾಡುವುದಾದರೆ ನಾನು ಶಾಲೆಗೆ ಬರುವುದಿಲ್ಲ, ಡಿಸಿಪ್ಲಿನ್ ಇರಬೇಕು ಎಂದು ನಾನು ಹೇಳಿದೆ. ಎಲ್ಲರಿಗೂ ಜವಾಬ್ದಾರಿ ಇರಬೇಕು. ವರ್ಗವನ್ನು ರೆಗ್ಯುಲರ್ ಆಗಿ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ, ರೂಲ್ಸ್ ಪ್ರಕಾರ ಅದನ್ನು ಮಾಡುತ್ತೇವೆ. ಮಾಲ್ ಪ್ರಾಕ್ಟಿಸ್ ಆದಷ್ಟು ಕಡಮೆ ಮಾಡಲಾಗಿದೆ. ಶ್ರೀ ಗಾಡಿ ಅವರು ಗುರು ಹೇಗಿರಬೇಕು, ಅವರ ಕರ್ತವ್ಯವೇನು ಎಂದು ಮುಂತಾಗಿ ತಿಳಿಸಿದ್ದಾರೆ, ಅವರಿಗೆ ಹೆಚ್ಚು ಆಸಕ್ತಿ ಇದೆ. ಉಪಾಧ್ಯಾಯರಿಗೆ ಜವಾಬ್ದಾರಿಯಿರಬೇಕು, ಅವರು ಆಸಕ್ತಿ ವಹಿಸಬೇಕು. ಎಲ್ಲರೂ ಸೇರಿ ಇರುವ ಲೋಪಗಳನ್ನು ಸರಿಪಡಿಸಬೇಕು. ಮಿಡ್ ಡೇ ಮೀಲ್ಸ್ ವಿಚಾರ ಹೇಳಿದರು. ಅವನ್ನು ಯಾರು ನೋಡಿಕೊಳ್ಳಬೇಕು? ಧಾನ್ಯವನ್ನು ಅದಕ್ಕೆ ನೇಮಿಸೋಣ? ಉಪಾಧ್ಯಾಯರೇ ನೋಡಿಕೊಳ್ಳಬೇಕು. ಅದಕ್ಕೆ ಬೇರೆ ವ್ಯವಸ್ಥೆ ಏನುತಾನೆ ಮಾಡಲು ಸಾಧ್ಯ? ಉಪಾಧ್ಯಾಯರು ಕಂಟ್ರೋಲ್ ಮಾಡಬಹುದು.

ಶ್ರೀ ಕೆ. ಪ್ರಭಾಕರ್.—ಸೂಪರ್‌ವಿಷನ್ ಲೋಕಲ್ ಬಾಡಿಸ್‌ಗೆ ವಹಿಸಬಹುದು.

ಶ್ರೀ ಎ. ಆರ್. ಬದರೀನಾರಾಯಣ.—ಅದನ್ನು ಮಾತೆತ್ತಣ. ದೊಡ್ಡದೊಡ್ಡ ಕಟ್ಟಡ ಮಾಡಿದ್ದಾರೆ ಎಂದು ಹೇಳಿದರು. ಒಬ್ಬಬ್ಬರು ಮಾಡಿರಬಹುದು. ಏನು ಮಾಡುವುದು? ಅವರಿಗೆ ಶಿಕ್ಷೆಯನ್ನು ನಾನು ಕೊಡಬಹುದಿತ್ತೇ, ಅವರು ಯಾವ ಶಿಕ್ಷೆಯನ್ನು ಅನುಭವಿಸಬೇಕಾಗಿತ್ತೋ ಅದನ್ನು

ಅನುಭವಿಸುತ್ತಾರೆ. ಮಕ್ಕಳಿಗೆ ಕೊಡತಕ್ಕ ಆಹಾರವನ್ನು ತೆಗೆದುಕೊಂಡು ಹೋಗಿ ದುರ್ವ್ಯವಹಾರ ಮಾಡಿದ್ದಾರೆ. ಕಡೂರಿನ ನಿದರ್ಶನ ಬಂತು, ಹುಡುಗರೇ ಕಂಪ್ಲೇಂಟ್ ಮಾಡಿದರು, ಅರೆಸ್ಟ್ ಮಾಡಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಇಂಥ ದುರ್ವ್ಯವಹಾರಗಳು ನಡೆಯುತ್ತವೆ, ಅವನ್ನು ಬಿಡಿಸಬೇಕು.

ಶ್ರೀ ಪಿ. ಎಂ. ಘೌಡಿ.—ದುರ್ವ್ಯವಹಾರಗಳು ಅನೇಕ ಕಡೆ ನಡೆಯುತ್ತವೆ, ಇದನ್ನು ಸರಿಪಡಿಸಬೇಕಾಗಿದೆ ಎಂದು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅನೇಕ ಕಡೆ ಟೀಚರ್ಸ್ ಪೋಲೀಸ್ ಸಬ್‌ಇನ್‌ಸ್ಪೆಕ್ಟರ್‌ಗೆ ದುಡ್ಡು ಕೊಟ್ಟು ಬಿಡಿಸಿಕೊಂಡು ಬಂದಿದ್ದಾರೆ.

ಶ್ರೀ ಎ. ಆರ್. ಬದರೀನಾರಾಯಣ.—ಇದಕ್ಕೆ ಸಾರ್ವಜನಿಕರ ಸಹಕಾರವೂ ಬೇಕು. ಕಡೂರಿನಲ್ಲಿ ವಿದ್ಯಾರ್ಥಿಗಳು ಕಂಪ್ಲೇಂಟ್ ಮಾಡಿದರು, ಕೂಡಲೇ ಅವನನ್ನು ಅರೆಸ್ಟ್ ಮಾಡಿದರು. ಹಾಗೆ ಸಾರ್ವಜನಿಕರು ಎಲ್ಲಿ ದೋಷವಿದೆ ಎಂದು ಹೇಳಿದರೆ, ಸರಿಪಡಿಸಬಹುದು.

ಶ್ರೀ ಹಂಜಿ ಶಿವಣ್ಣ.—ಕಡೂರಿನ ಕೇಸನ್ನು ಮುಚ್ಚಿ ಹಾಕುತ್ತಾರೆ ಎನ್ನುವ ಸಂಶಯ ಬಂದಿದೆ. ಅದನ್ನು ಮುಂದುವರೆಸುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.— ಮುಂದುವರಿಸುತ್ತೇವೆ. ಬಿಡುವುದಿಲ್ಲ. ಸಿಕ್ಕುವುದೇ ಅಪರೂಪ, ಬಿಟ್ಟರೆ ಹೇಗೆ ಆಗುತ್ತದೆ ? ಮಾನ್ಯ ಆರ್ಯಾಗಂ ಅವರು ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಅಂಡ್ ಎಕನಾಮಿಕ್ ಥ್ರೆಂಡ್ಸ್ ಬಗ್ಗೆ ಹೇಳಿದರು.

ಶ್ರೀ ಕೆ. ಪ್ರಭಾಕರ್.—ನಾನು ಕೇಳಿದ್ದನ್ನೂ ಸೇರಿಸಿಕೊಂಡು ಉತ್ತರ ಕೊಡಿ.

ಶ್ರೀ ಎ. ಆರ್. ಬದರೀನಾರಾಯಣ.—ಇದರ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳುವುದಾದರೆ, ಇವರಲ್ಲಿ ಎಕ್ಸ್‌ಪರ್ಟ್ಸ್ ಇದ್ದಾರೆ, ಇದು ಖಾಸಗಿಯಲ್ಲಿ ಇನ್‌ಸ್ಟಿಟ್ಯೂಟ್ ಅಲ್ಲ. ಡೆಲ್ಲಿನ ಸ್ಕೂಲ್ ಆಫ್ ಎಕನಾಮಿಕ್ಸ್ ಹೇಗೆ ನಡೆಯುತ್ತಿದೆ ಎಂದು ಎಲ್ಲರೂ ನೋಡಿದ್ದಾರೆ. ಆ ತತ್ವವನ್ನು ಅನುಸರಿಸಿಕೊಂಡು ಇವರೂ ಮಾಡಿದ್ದಾರೆ. ಈ ಇನ್‌ಸ್ಟಿಟ್ಯೂಟ್‌ನಲ್ಲಿ ಏನಾದರೂ ದೋಷ ದೋಷ ಇದ್ದರೆ ಅವಕ್ಕೆ ನಿರ್ಭಂಧ ಹಾಕೋಣ, ಏನು ಬೇಕಾದರೂ ಮಾಡೋಣ.

ಆಮೇಲೆ ಮಾನ್ಯ ಸದಸ್ಯರು ಒಬ್ಬರು ಸ್ಕೂಲ್ ಆಫ್ ಮೈನ್ಸ್ ಬಗ್ಗೆ, ಡೈರೆಕ್ಟರ್ ಇಲ್ಲ ಎಂದು ಹೇಳಿದರು. ಅದು ಸರ್ಕಾರದ ಗಮನಕ್ಕೆ ಬಂದಿದೆ, ಸಾಕಷ್ಟು ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಫರ್ಸ್ಟ್ ಗ್ರೇಡ್ ಕಾಲೇಜ್ ಬಗ್ಗೆ, ಇದಕ್ಕೆ ವಿಶೇಷವಾದ ಫಂಡ್ ಗ್ರಾಂಟ್ಸ್ ಕೊಡುತ್ತೇವೆಯೇ ಹೊರತು ಇದರ ಮೇಲೆ ಸರ್ಕಾರದ ನೇರ ಕಂಟ್ರೋಲ್ ಇಲ್ಲ ಸರ್ಕಾರ ಇದನ್ನು ವಹಿಸಿಕೊಳ್ಳಿ ಎಂದರೆ, ಗವರ್ನಿಂಗ್ ಕೌನ್ಸಿಲ್‌ನವರು ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ವಹಿಸಿಕೊಡುತ್ತೇವೆಂದರೆ, ಸರ್ಕಾರ ತೆಗೆದುಕೊಳ್ಳಬೇಕೋ ಬಿಡಬೇಕೋ ಯೋಚನೆ ಮಾಡಿ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದು ಈಗ ಪ್ರೈವೇಟ್ ಆಗಿರುವುದರಿಂದ ಈಗ ಏನೂ ಮಾಡುವುದಕ್ಕಾಗುವುದಿಲ್ಲ. ಮಾನ್ಯ ರುದ್ರಪ್ಪನವರು ಕಟ್ಟಡಗಳ ಬಗ್ಗೆ ಗ್ರಾಂಟ್ ಅನ್ನು ಇನ್‌ಕ್ರೀಸ್ ಮಾಡಬೇಕು ಎಂದು ಹೇಳಿದರು. ನರ್ಸರಿ ಸ್ಕೂಲ್‌ಗಳನ್ನು ಕೊಡಬೇಕು ಎಂದು ಹೇಳಿದರು. ನರ್ಸರಿ ಸ್ಕೂಲ್ಸ್ ವಿಚಾರ ಬಂದಾಗ, ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರದವರು 100 ಕೋಟಿ ರೂಪಾಯಿಗಳನ್ನು ಪ್ರೈಮರಿ ಎಜುಕೇಷನ್‌ಗೆ ಅಲಾಟ್ ಮಾಡಿದ್ದಾರೆ. ಇದರಲ್ಲಿ 25 ಕೋಟಿ ರೂಪಾಯಿಗಳನ್ನು ಎಜುಕೇಷನ್ ಖಾತೆಗೂ, 75 ಕೋಟಿ ರೂಪಾಯಿಗಳನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೂ ವಿನಿಯೋಗ ಮಾಡಬೇಕು ಎಂದು ತೀರ್ಮಾನ ಮಾಡಿದೆ. ಅದರಲ್ಲಿ ನಮ್ಮ ಅಂಶ ಬಂದಾಗ ಏನು ಬೇಕೋ ಅದನ್ನು ಮಾಡತಕ್ಕಾಂಥಾದ್ದು ಇದೆ, ಮಾಡುತ್ತೇವೆ. ಮಾನ್ಯ ಪುಟ್ಟಸ್ವಾಮಿಯವರು Corruption has entered into Education Department ಎಂದು ಹೇಳಿದರು. ಯಾವಾಗ ಎಂಟರ್ ಆಯಿತು ? ನಾವು ಬಂದಮೇಲೆ ಎಂಟರ್ ಆಯಿತೋ, ಹಿಂದೆ ಎಂಟರ್ ಆಗಿತ್ತೋ ಈ ವಿಚಾರ ಗೊತ್ತಿಲ್ಲ. ಎಂಟರ್ ಆಗಿದ್ದನ್ನು ಹೊರಗೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮ ರಾಜ್ಯದಲ್ಲಿರತಕ್ಕ ಪರಿಣಿತರನ್ನು ಉಪಯೋಗಿಸಿಕೊಂಡು ಇದನ್ನು ಹೇಗೆ ಸುಧಾರಣೆ ಮಾಡಬೇಕು ಎಂದು ಆಲೋಚನೆ ಮಾಡುವುದು ಒಳ್ಳೆಯದು.

ಶ್ರೀ ಎ. ಆರ್. ಬದರೀನಾರಾಯಣ.—ಈಗಾಗಲೇ ರಾಜ್ಯ ಸಮಿತಿಗಳು, ಅನೇಕ ಸಮಿತಿಗಳನ್ನು ಮಾಡಿಬಿಟ್ಟಿದ್ದೇವೆ. ಬೇಕಾದಷ್ಟು ಸಮಿತಿಗಳು ಆಲ್ ಇಂಡಿಯಾ ಲೆವೆಲ್‌ನಲ್ಲಿಯೂ, ಈ ಲೆವೆಲ್‌ನಲ್ಲಿಯೂ ಇದೆ. ಇನ್ನೂ ಮಾಡುತ್ತಾ ಹೋದರೆ, ಸರಿಹೋಗುವುದಿಲ್ಲ. ಆದರಲ್ಲಿ ಏನು

(ಶ್ರೀ ಎ. ಆರ್. ಬದರೀನಾರಾಯಣ)

ದೋಷ ಇವೆ ಎಂದು ನಮಗೆ ಗೊತ್ತಿದೆ. ಅದನ್ನು ನಾವು ಮಾಡುತ್ತಿದ್ದೇವೆ. ಬೇರೆ ಸಮಿತಿಗಳನ್ನು ಮಾಡುವುದರಲ್ಲಿ ಏನೂ ಉಪಯೋಗವಿಲ್ಲ ವಾನ್ಯ ಹುಗೇಗೌಡರು ಟೀಚರ್ಸ್ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಮಕ್ಕಳಿಗೆ ಅಕ್ಷರಾಭ್ಯಾಸ ಸರಿಯಾಗಿ ಆಗುತ್ತಿಲ್ಲ ಎಂದು ಹೇಳಿದರು. ರಿಫಾರಂ ಸಹ ಆಗಬೇಕು ಎಂದು ಹೇಳಿದರು. ಇದನ್ನು ನಾವು ಆಲ್ ಇಂಡಿಯಾ ಲೆವೆಲ್‌ನಲ್ಲಿ ಯೋಚನೆ ಮಾಡುತ್ತಿದ್ದೇವೆ. ಮತ್ತು ಕರೆಸ್ಪಾಂಡೆನ್ಸ್ ಕೋರ್ಸ್ ಇಂಟರ್‌ಡ್ಯೂಸ್ ಮಾಡಿದ ಬಗ್ಗೆ ಹೇಳಿದರು. ಅದನ್ನು ಜಾಸ್ತಿ ಮಾಡಬೇಕು ಎಂದು ಯೋಚನೆಮಾಡುತ್ತಾ ಇದ್ದೇವೆ. ಮಾನ್ಯ ಕೃಷ್ಣರಾವ್ ಅವರು ಸ್ಟ್ಯಾಂಡರ್ಡ್ ಆಫ್ ಎಜುಕೇಷನ್ ಬಗ್ಗೆ ಹೇಳಿದರು. ಅವೆಲ್ಲವನ್ನೂ ಕೂಡ ನಾವು ತಿಳಿದಿದ್ದೇವೆ, ಮತ್ತು ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸಯ್ಯ ನಾಮಿನಿ.—ರಾಷ್ಟ್ರೀಯ ಐಕ್ಯತೆಗೆ ಕನ್ನಡ, ತೆಲುಗು ಏಕ ಲಿಪಿ ಆಗಬೇಕು ಎಂಬ ತಜ್ಞರ ಅಭಿಪ್ರಾಯ ಇದೆ, ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಎ. ಆರ್. ಬದರೀನಾರಾಯಣ.—ಅದನ್ನು ನಾವು ಯೋಚಿಸಬೇಕಾಗುತ್ತದೆ. That is a matter which has got to be examined carefully.

† ಶ್ರೀ ಪಿ. ಎಸ್. ಕೌಜಲಗಿ (ಯುವಜನ ಕಲ್ಯಾಣ ಶಾಖೆಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ವಿದ್ಯಾ ಇಲಾಖೆ ಮತ್ತು ಯುವಜನ ಶಾಖೆಯ ಮೇಲೆ ಸಾಕಷ್ಟು ಚರ್ಚೆ ನಡೆದಿದೆ. ನನಗೆ ಸಂಬಂಧಪಟ್ಟ ಇಲಾಖೆ ಏನೆಂದರೆ, ಯುವಕ ಸಂಘಗಳು ಮತ್ತು ವಾಚನಾಲಯಗಳು. ಇವರ ಬಗ್ಗೆ ಮಾನ್ಯ ಸದಸ್ಯರುಗಳು ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಮೇರೆಗೆ ನಷ್ಟವಾದ ವಿಚಾರಗಳನ್ನು ತಿಳಿಸಲು ಬಯಸುತ್ತೇನೆ. ಇವತ್ತಿನ ವಿಜ್ಞಾನ ಯುಗದಲ್ಲಿ ನಮ್ಮ ಯುವಕರಿಗೆ ಯಾವ ಮಾರ್ಗದರ್ಶನ ಮಾಡಬೇಕು ಎನ್ನುವುದು ಮಹತ್ವದ ವಿಷಯ. ಅವನ್ನು ನಾವು ತಿಳಿಸುತ್ತೇನೆ. ನಮ್ಮ ಯುವಕರಿಗೆ ಇಷ್ಟು ವರ್ಷಗಳಿಂದ ಬೆಳೆದು ಬಂದ ಅವರ ಮನೋವೃತ್ತಿಯಲ್ಲಿ ಬದಲಾವಣೆ ಆಗಬೇಕಾಗಿ, ಬದಲಾವಣೆಯಾಗಬೇಕಾದರೆ, ಕೆಲವೊಂದು ವಿಶಿಷ್ಟವಾದ ನಿಯಮಗಳನ್ನು ಅನುಸರಿಸಿ ಅವರಿಗೆ ಮಾರ್ಗದರ್ಶನ ಮಾಡಬೇಕಾಗಿದೆ. ವ್ಯಕ್ತಿಯಲ್ಲಿ ಹುದುಗಿದ ಕ್ರಿಯಾತ್ಮಕ ಶಕ್ತಿಗಳನ್ನು ಬಡಿದೆಬ್ಬಿಸಿ ಅತನಿಗೆ ಯೋಗ್ಯ ಸ್ಥಳಾವಕಾಶವನ್ನು ಕಲ್ಪಿಸಿ ಕೊಡುವುದು. ಅವನಿಗೆ ತನ್ನ ಪರಿಸರದ ಪರಿಚಯ ಮಾಡಿಕೊಡುವುದು, ಅವನ ಕುಟುಂಬ ಅವನ ಸಮಾಜ, ರಾಷ್ಟ್ರಗಳಲ್ಲಿ ಅವನ ಪಾತ್ರವನ್ನು ಸ್ಪಷ್ಟಪಡಿಸುವುದು, ತನ್ನ ಸಮಾಜದಿಂದ ಬಳುವಳಿಯಾಗಿ ಬಂದ ಭಾಷೆ, ಸಂಸ್ಕೃತಿ, ಸಭ್ಯತೆಯನ್ನು ತಿಳಿಸಿಕೊಡುವುದು, ಸಾಮೂಹಿಕ ಜೀವನವನ್ನು ನಡೆಸಲು ಬೇಕಾದ ಸಂಯಮ, ಶಿಸ್ತು, ಸದಾಚಾರ ಸದ್ವರ್ತನೆಗಳನ್ನು ಅವನಲ್ಲಿ ಬೇರೂರಿಸುವುದು, ನಾಡಿಗಾಗಿ ದುಡಿಯುವ ಹಂಬಲ, ನಾಡರಕ್ಷಣೆಗಾಗಿ ಹೋರಾಡುವ ಛಲ ಮುಂತಾದ ಉದಾತ್ತ ಗುಣಗಳನ್ನು ಬೇರೂರಿಸುವುದು, ತಾನೂ ಬದುಕಿ ಜನ ಬದುಕಬೇಕೆಂಬ ಸ್ವಾರ್ಥಪರಾರ್ಥಗಳ ಇತಿಮಿತಿಯನ್ನು ಅರುಹುವುದು, ಕ್ರಿಯಾತ್ಮಕ ಚಟುವಟಿಕೆಗಳ ಮುಖಾಂತರ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು. ಈ ಎಲ್ಲಾ ಧ್ಯೇಯ ಧೋರಣೆಗಳನ್ನು ಯುವಕ ಸಂಘಗಳು ಮುಖಾಂತರ ದೊರಕಿಸಿಕೊಳ್ಳುವ ಸಲುವಾಗಿ ರಾಜ್ಯದ ಎಲ್ಲಾ ಭಾಗಗಳಲ್ಲೂ ಸುಮಾರು 3456 ಯುವಕ ಸಂಘಗಳು ಸ್ಥಾಪಿಸಲ್ಪಟ್ಟಿವೆ, ಈಗ ಯುವಕರ ಸಂಘಗಳು ಯಾವ ರೀತಿಯಲ್ಲಿ ಕೆಲಸ ನಿರ್ವಹಿಸಬೇಕು, ಎನ್ನುವುದರ ಬಗ್ಗೆ ನಿಯಮಾವಳಿಗಳನ್ನು ಮಾಡಿದೆ. ಆ ನಿಯಮಕ್ಕನುಗುಣವಾಗಿ ಯುವಕ ಸಂಘಗಳಿಗೆ ಧನಸಹಾಯ ಕೊಡುತ್ತಾ ಇದ್ದೇವೆ. ಯುವಕ ಸಂಘಗಳು ಕೇವಲ ಒಂದು ಗುಂಪಿಗೆ ಅಥವಾ ಕೋಮಿಗೆ ಒಳಗಾಗದೆ ಅಲ್ಲಿ ಯಾವ ಒಂದು ಜಾತೀ ಬೇಧ ಭಾವ ಇಲ್ಲದೆ ನಮ್ಮ ಕನ್ನಡ ನಾಡಿನ ಯುವಕರು ಒಂದುಗೂಡಿ ಕೆಲಸಗಳನ್ನು ಮಾಡುವಂತೆ ಸಂಘಗಳು ನಿರ್ಮಿಸಲ್ಪಟ್ಟಿವೆ. ಉದಾಹರಣೆಗಾಗಿ ಇವತ್ತಿನ ಬರಗಾಲ ಪರಿಸ್ಥಿತಿಯಲ್ಲಿ ಎಷ್ಟೋ ಯುವಕ ಸಂಘಗಳು ನಿಸ್ವಾರ್ಥವಾಗಿ ಕಾಳು ವಿತರಣೆ, ಸಕ್ಕರೆ ವಿತರಣೆ ಬಡ ಜನರಿಗೆ ರಾಜ್ಯ ಸರ್ಕಾರದವರು ಒದಗಿಸುವ ಹಣವನ್ನು ಅತ್ಯ ಪ್ರತಿಷ್ಠೆಯಿಲ್ಲದೆ ಮಾಡುತ್ತಾ ಇರುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಇದು ಅಲ್ಲದೆ ಆಯಾಯ ಭಾಗಗಳಿಂದ ಯುವಕ ಸಂಘಗಳನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಸ್ಥಾಪಿಸಬೇಕು ಎನ್ನುವ ಅಭಿಲಾಷೆಯುಳ್ಳ ಯುವಕರ ಸಂಖ್ಯೆ ಹೆಚ್ಚಿಗೆ ಬರುತ್ತಿದೆ. ಅದಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ಕೂಡ ಇನ್ನು ಹೆಚ್ಚಿನ ರೀತಿಯಲ್ಲಿ ಯುವಜನರಿಗೆ ಸಂಘಗಳ ಮೂಲಕ ಮಾರ್ಗದರ್ಶನ ಮಾಡುವ ಇಚ್ಛೆ ಸರ್ಕಾರಕ್ಕೆ ಇದೆ. ರಾಜ್ಯ ಮಟ್ಟದಲ್ಲಿ 26 ಲಕ್ಷ ರೂಪಾಯಿ ಖರ್ಚು ಮಾಡಿ ಯುವಕ ಸಂಘವನ್ನು ಎಲ್ಲಾ ಕಡೆಗಳಲ್ಲಿಯೂ ಕಟ್ಟಿಸಲು ಸರ್ಕಾರ ಆದೇಶವನ್ನು ಕೊಟ್ಟಿದೆ. ಅಲ್ಲಿ ಯಾವುದೇ ಜಾತಿಯ ಭೇದಭಾವನೆ ಇಲ್ಲದೆ

ಯುವಕರಿಗೆ ಬೇಕಾಗುವ ಕೆಲವೊಂದು ರಚನಾತ್ಮಕ ಕಾರ್ಯಗಳ ಸಲುವಾಗಿ ಸೆಂಟರ್‌ಗಳನ್ನು ತೆಗೆದಿದೆ. ಅದರಲ್ಲಿ ಕೆಲವರಿಗೆ ಅವರ ಇಚ್ಛೆ ಪ್ರಕಾರ ಅಂಚೆ ಸಂಶೋಧನೆ, ಏರೋಪ್ಲೇಡಲಂಗ್, ಪೊಟೋಗ್ರಾಫಿ, ಲೈಬ್ರರಿ, ಇತ್ಯಾದಿ ಹಾಬಿ ಸೆಂಟರ್ಸ್ ನಿರ್ಮಾಣಮಾಡಿ ಯುವಕರಿಗೆ ಸದ್ಬುದ್ಧಿ ಬರಲಿ ಎಂದು ನಮ್ಮ ಸರ್ಕಾರ ದಿಟ್ಟ ಹೆಜ್ಜೆಯ ಕಾರ್ಯಕ್ರಮ ಕೈಗೊಂಡಿದೆ. ಅದು ಅಲ್ಲವೆ ಒಂದು ಯೂತ್ ಹಾಸ್ಟಲ್ ನಾವು ಕಟ್ಟಲು ನಿರ್ಧಾರ ಮಾಡಿದ್ದೇವೆ. ಏತಕ್ಕೆಂದರೆ ನಾವು ಶಾಲೆಯಲ್ಲಿ ಕೇವಲ ಪುಸ್ತಕಗಳಿಗೆ ಅಂಟಿಕೊಂಡು ಅದೇ ಅಭ್ಯಾಸವನ್ನು ಮಾಡಿ ಪರೀಕ್ಷೆಗಳನ್ನು ಪಾಸು ಮಾಡುವ ರೀತಿ ನಮ್ಮಲ್ಲಿ ಇದೆ. ನಮ್ಮಲ್ಲಿರುವ ಹಾಸ್ಟಲ್ ಬೋರ್ಡ್ ಸ್ಕೂಲು ಎಂದು ಹೇಳಬಹುದು. ಹೊರಗಡೆ ಹೋಗಿ ವಿಶಿಷ್ಟವಾದಂಥ ವಾತಾವರಣದಲ್ಲಿ ಸ್ವೇಚ್ಛೆಯಾಗಿ ಅಭ್ಯಾಸಮಾಡಿ ಹೆಚ್ಚು ಹೆಚ್ಚು ಯುವಕರನ್ನು ಚರ್ಚೆಗೆ ಸರ್ದಿಸಿ ನಮ್ಮ ರಾಷ್ಟ್ರದ ಒಂದು ಧ್ಯೇಯ ದೋರಣೆಗಳು ಅಥವಾ ನಮ್ಮ ಕನ್ನಡನಾಡಿನ ಗತವೈಭವದ ಇತಿಹಾಸವನ್ನು ಅಭ್ಯಸಿಸಲು ಅವಕಾಶವಿರಬೇಕು. ಅದಲ್ಲದೆ ಕೇವಲ ನಾವು ಪಠ್ಯಪುಸ್ತಕದ ಹುಳುವಾಗಿ ಬದುಕುವುದಕ್ಕಿಂಥ, ಜಾಣರಾಗಿ ಮತ್ತು ವಿದ್ಯಾವಂತರಾಗಿ ಉತ್ತಮ ವರ್ಗದಲ್ಲಿ ಪಾಸಾಗಿ ಬಂದರೂ ಸಹಿತ, ಶರೀರ ಸಂಪತ್ತು ನಮ್ಮಲ್ಲಿ ಇಲ್ಲದೆ ಹೋದರೆ ಎಷ್ಟೇ ಜಾಣರು ಇದ್ದರೂ ವಿಫಲರು ಆಗಬಹುದು. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಈ ಒಂದು ಶರೀರ ಸಂಪತ್ತನ್ನು ಬೆಳೆಸಬೇಕು, ಆದೇ ರೀತಿಯಲ್ಲಿ ಪ್ರತಿಯೊಬ್ಬ ಮನುಷ್ಯನೂ ಸಹ ಸುಖಮಯವಾದ ಜೀವನವನ್ನು ನಡೆಸಬೇಕು ಎನ್ನುವ ಉದ್ದೇಶದಿಂದ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಆಟದ ಆಸಕ್ತಿಗಳನ್ನು ಹೆಚ್ಚಿಸಬೇಕಾಗಿದೆ. ಆಟದ ಆಸಕ್ತಿಯನ್ನು ಹೆಚ್ಚಿಸಬೇಕಾದರೆ ಜಿಲ್ಲಾ ಮಟ್ಟದಲ್ಲಿ ಪ್ರತಿಯೊಂದು ಸ್ಥಳದಲ್ಲೂ ದೊಡ್ಡದಾದ ಒಂದು ಸ್ಟೇಡಿಯಂ ಕಟ್ಟಿಸಬೇಕು ಎನ್ನುವ ಒಂದು ವಿಚಾರವನ್ನು ರಾಜ್ಯ ಸರ್ಕಾರ ಇಟ್ಟುಕೊಂಡು ನಡೆಸುತ್ತಿದ್ದೇವೆ. ಈ ವರ್ಷ, ಕಳೆದವರ್ಷ ರಾಜ್ಯಸರ್ಕಾರ ಶಿವಮೊಗ್ಗಾ ಜಿಲ್ಲೆ, ಬೆಳಗಾಂ ಜಿಲ್ಲೆಗೆ ಧನ ಸಹಾಯವನ್ನು ಕೊಟ್ಟು ಅಲ್ಲಿ ಸ್ಟೇಡಿಯಂ ಕೆಲಸ ಉತ್ತಮ ರೀತಿಯಲ್ಲಿ ನಡೆಯುತ್ತಾ ಇದೆ ಎಂದು ಕಂಡುಬಂದಿದೆ. ಅದೇ ಪ್ರಕಾರ ಬಳ್ಳಾರಿ ಜಿಲ್ಲೆ ಮತ್ತು ತುಮಕೂರು, ಕೂರ್ಗ್ ಜಿಲ್ಲೆಯ ಸ್ಟೇಡಿಯಂ ಬಗ್ಗೆ ವಿಚಾರಣೆ ನಡೆಯುತ್ತಿದೆ. ಇದು ಅಲ್ಲದೆ ರಾಜ್ಯದ ಮುಖ್ಯ ಮುಖ್ಯ ತಾಲ್ಲೂಕು ಮಟ್ಟದ ಸ್ಥಳಗಳಲ್ಲಿ ಸಹಿತ ನಾವು ಈ ಸ್ಟೇಡಿಯಂಗಳನ್ನು ಸಣ್ಣ ಪ್ರಮಾಣದಲ್ಲಿ ಮಾಡಬೇಕು ಎನ್ನುವ ಇಚ್ಛೆ ಇದೆ. ಈ ಎಲ್ಲಾ ಸೌಲಭ್ಯಗಳು ಶಹರಿನಲ್ಲಿ ಇರತಕ್ಕ ಯುವರರಿಗೆ ಇವೆ. ಆದರೆ ನಮ್ಮ ಹಳ್ಳಿಗಳಿಂದ ಬರತಕ್ಕ ಯುವಕರಿಗೆ ಯಾವ ಸೌಲಭ್ಯ ಹೆಚ್ಚಿಗೆ ಸಿಕ್ಕುತ್ತಾ ಇಲ್ಲ. ಆದುದರಿಂದ ಈ ಕ್ರೀಡಾ ರಂಗದಲ್ಲಿ ಕಳೆದ ವರ್ಷ ರಾಜ್ಯ ಸರ್ಕಾರ ಸಾಕಷ್ಟು ಆಸಕ್ತಿ ವಹಿಸಿ ಕೇವಲ ಹಳ್ಳಿಗಳಿಂದಲೇ ಆರಿಸಿ ಬಂದ ಯುವಕರ ಕ್ರೀಡಾ ಸಮ್ಮೇಳನವನ್ನು ನಡೆಸಿತು. ಇಲ್ಲಿಂದ ಆರಿಸಿಬಂದಂಥ ಯುವಕರನ್ನು ರಾಷ್ಟ್ರಮಟ್ಟದಲ್ಲಿ ಭಾಗವಹಿಸಲು ಡೆಲ್ಲಿಗೆ ಕಳಹಿಸಿದೆವು. ಆದುದರಿಂದ ಸಾಕಷ್ಟು ಹಳ್ಳಿ ಯುವಕರು ಪ್ರೊತ್ಸಾಹವನ್ನು ತೋರಿಸುತ್ತಿದ್ದಾರೆ. ಆ ಪ್ರೊತ್ಸಾಹಕ್ಕೆ ಸಾಕಷ್ಟು ಅನುಕೂಲಗಳನ್ನು ಒದಗಿಸಿಕೊಡುವುದು ನಮ್ಮ ಕರ್ತವ್ಯ. ಇದು ಅಲ್ಲದೆ ನಮ್ಮ ಕಾಲೇಜಿನಲ್ಲಿ ಇರತಕ್ಕ ವಿದ್ಯಾರ್ಥಿಗಳನ್ನು ಸಹಿತ ಅವರ ಬಿಡುವಿನ ಸಮಯದಲ್ಲಿ ಅವರನ್ನು ಕೆಲಸದಲ್ಲಿ ತೊಡಗುವುದಕ್ಕಾಗಿ ಒಂದು ಯೋಜನೆಯನ್ನು ಯುವಜನ ಶಾಖೆ ಮಾಡುತ್ತಾ ಇದೆ. ಎನ್.ಎಚ್.ಎಸ್. ಸ್ಕೀಮ್ ಎಂದು ಹೇಳಿ ಒಂದು ಸ್ಕೀಮ್‌ನ್ನು ಸರ್ವೇಸಾಧಾರಣವಾಗಿ ರಾಜ್ಯದ ಎಲ್ಲಾ ಕಡೆಗಳಿಗೂ ಮಾಡಬೇಕು ಎನ್ನುವ ಇಚ್ಛೆ ಇದೆ. ವಿದ್ಯಾರ್ಥಿಗಳು ಸಾಕಷ್ಟು ಅದರಲ್ಲಿ ಆಸಕ್ತಿ ವಹಿಸುತ್ತಿದ್ದಾರೆ. ಇದರ ಮೇಲೆ ನಾನು ನಮ್ಮ ವಿದ್ಯಾರ್ಥಿಗಳಿಗೆ ಬಿಡುವಿನ ವೇಳೆಗಳಲ್ಲಿ ಬೆವರಿನ ಬೆಲೆ ಅರ್ಥವಾಗಬೇಕು ಆದರಿಂದ ನಮ್ಮ ರಾಷ್ಟ್ರ ಉದ್ಧಾರವಾಗುತ್ತದೆ, ಕಾಲೇಜು ಮಟ್ಟದಲ್ಲಿ ಅದರ ಅರ್ಥವನ್ನು ನಾವು ಮಾಡಿಕೊಳ್ಳದೆ ಹೋದರೆ ಮುಂದೆ ನಾವು ವಿದ್ಯಾವಂತರಾಗಿ ವಿಶ್ವವಿದ್ಯಾನಿಲಯದಿಂದ ಹೊರಬಿದ್ದ ನಂತರ ಒಂದು ನಮ್ಮ ಧೋರಣೆ ಏನು ಇದೆ ಕೇವಲ ನೌಕರಿಗಾಗಿ ಅಲೆದಾಡುವುದು ಹೋಗಬೇಕಾದರೆ, ಎಲ್ಲಿಯವರೆಗೆ ನಮ್ಮ ಯುವಕರಿಗೆ ನಮ್ಮ ಸ್ವಂತಕಾಲಮೇಲೆ ನಿಲ್ಲಬೇಕು ಸ್ವಂತ ಉದ್ಯಮವನ್ನು ಮಾಡಬೇಕು ಎನ್ನುವ ಧ್ಯೇಯದೋರಣೆ ಬರುವುದಿಲ್ಲವೋ ಅಲ್ಲಿಯವರೆಗೆ ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ನಿಲ್ಲುವುದು ಸಹಜ. ನಿದು ಕೇವಲ ಒಂದು ವಿದ್ಯಾ ಇಲಾಖೆಯ ದೋಷವಲ್ಲ, ನಮ್ಮ ಮನೋವೃತ್ತಿ ಇದರಲ್ಲಿ ಬದಲಾಗಬೇಕು. ಆದಕ್ಕೂ ಪಾಲಕರ ಹೊಣೆ ಇದೆ. ಕೇವಲ ಮಕ್ಕಳನ್ನು ಶಾಲೆಗೆ ಕಳುಹಿಸುತ್ತೇವೆ ವಿದ್ಯಾವಂತರಾಗುತ್ತಾರೆ ಅಥವಾ ನಾಡಿನ ಒಂದು ಉತ್ತಮವಾದ ನೌಕರರಾಗುತ್ತಾರೆ ಎಂದು ಹೇಳಿದರೆ ಶಕ್ಯವಿಲ್ಲ. ನಮ್ಮ ಮಕ್ಕಳು ನಿಜವಾಗಿ ಉತ್ತಮವಾದ ನಾಗರೀಕನಾಗಿ ಒಂದು ರಾಷ್ಟ್ರದ ಹೊಣೆಯನ್ನು ಹೊರಬೇಕಾದರೆ, ಪಾಲಕರು ತಾವು ಸಹಿತ ಮಕ್ಕಳ ಮೇಲ್ವಿಚಾರಣೆಯನ್ನು ಮಾಡಿ ಮಕ್ಕಳು ಯಾವ ದಿಶೆಯಲ್ಲಿ ಹೋಗುತ್ತಿದ್ದಾರೆ ಎನ್ನುವುದನ್ನು ಅವರು ನೋಡಬೇಕು. ಮಕ್ಕಳಲ್ಲಿ ಕೆಸ್ತು ಅನುಕರಣೆ ಇದ್ದರೆ ಅವರು ಉತ್ತಮ ನಾಗರೀಕರಾಗುತ್ತಾರೆ, ದೊಡ್ಡವರಾದಮೇಲೆ ಕಿಸ್ತನ್ನು ಕಲಿಸುವುದು ಕಠಿಣವಾದ ವಿಷಯ;

(ಶ್ರೀ ವಿ. ಎಸ್. ಕೌಜಲಗಿ)

ಆದುದರಿಂದ ಈ ಶಿಕ್ಷಣ ಕ್ಷೇತ್ರದಲ್ಲಿ ಕಾಲೇಜಿನಲ್ಲಿ ಇರತಕ್ಕ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಂಬಂಧ ಬೆಳೆಯಬೇಕು. ಅದಕ್ಕಾಗಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸಲು ಕೇವಲ 24 ಕಾಲೇಜು ಗಳಲ್ಲಿ ಸ್ಟುಡೆಂಟ್ಸ್ ವೆಲ್‌ಫೇರ್ ಆಫೀಸರ್ ಎಂದು ನೇಮಕ ಮಾಡಿದ್ದೇವೆ. ಅಲ್ಲಿ ಇರತಕ್ಕ ಪ್ರೊಫೆಸರ್ಸ್ ಆಗಲಿ ಲೆಕ್ಚರರ್ಸ್ ಆಗಲಿ ಅವರನ್ನೇ ಮೇಲ್ವಿಚಾರಣೆಗೆ ರಾಜ್ಯ ಸರ್ಕಾರ ನೇಮಿಸಿದೆ ವಿದ್ಯಾರ್ಥಿಗಳಿಗೆ ಇರತಕ್ಕ ಸಮಸ್ಯೆಗಳನ್ನು ಒಂದು ಚಿಚ್ಚುಮನಸ್ಸಿನಿಂದ ಮಾತನಾಡಿ ಅವರ ಸಮಸ್ತ ಸಮಸ್ಯೆಗಳನ್ನು ಬಗೆಹರಿಸಲು ಈ ಒಂದು ಯೋಜನೆಯನ್ನು ಹಾಕಿದೆ. ಇದಲ್ಲದೆ ಇನ್ನೊಂದು ಅತಿ ಮುಹತ್ವದ ವಿಷಯವೇನೆಂದರೆ ಈ ಸಲ ಕೇಂದ್ರ ಸರ್ಕಾರ ಒಂದು ಯೋಜನೆ ಮಾಡಿ, ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಗೆ ತುತ್ತಾದ ಜನರ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿ ಅವರಿಗೆ ಯಾವ ರೀತಿಯಲ್ಲಿ ತಮ್ಮ ಕೈಯಿಂದ ಆದ ಸಹಾಯವನ್ನು ಮಾಡಬೇಕು ಎನ್ನುವ ಅರಿವನ್ನು ಮಾಡಿ ಕೊಡಲು ರಾಜ್ಯದಿಂದ 8 ಸಾವಿರ ವಿದ್ಯಾರ್ಥಿಗಳನ್ನು ಅಲ್ಲಿಗೆ ಕಳುಹಿಸಿದ್ದೇವೆ. ಇದರಲ್ಲಿ 6 ಸಾವಿರ ವಿದ್ಯಾರ್ಥಿಗಳು...

ಶ್ರೀ ಕಾಗೋಡು ತಿಮ್ಮಪ್ಪ.—ಈವೊತ್ತಿನ ಪತ್ರಿಕೆಯಲ್ಲಿ ನಾವು ನೋಡಿದೆವು. ಅಲ್ಲಿ ಕುಡಿಯುವ ನೀರಿನ ಅಭಾವ ಜಾಸ್ತಿಯಾಗಿರುವುದರಿಂದ ಬರಗಾಲ ಪ್ರದೇಶಕ್ಕೆ ಆ ಹುಡುಗರನ್ನು ಕಳುಹಿಸುವುದಿಲ್ಲ ಎನ್ನುವುದು ಪತ್ರಿಕೆಯಲ್ಲಿ ಪ್ರಕಟಣೆ ಆಗಿದೆ. ಇದನ್ನು ಏನಾದರೂ ಬದಲಾವಣೆ ಮಾಡಿದ್ದೀರಾ?

11-00 A. M.

ಶ್ರೀ ವಿ. ಎಸ್. ಕೌಜಲಗಿ.—ಇದು ಮುಂದಿನ ತಿಂಗಳ ಪ್ರೋಗ್ರಾಂ. ಅಲ್ಲಿ ಕುಡಿಯುವ ನೀರಿಲ್ಲ, ಇಲ್ಲಿಂದ ಕಳುಹಿಸಿದ ಜನರಿಗೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿ ಇದರಲ್ಲಿ ಇಲ್ಲ. ನಮ್ಮಲ್ಲರುವ ಬಿಸಿ ರಕ್ತದ ಯುವಕರು ಎದೆಗೊಟ್ಟು ಆ ಜನರಿಗೆ ಸಹಾಯ ಮಾಡಬೇಕು ಎನ್ನುವ ದೃಷ್ಟಿಯಿಂದ ನಾವು ಈ ಕೆಲಸವನ್ನು ಕೈಗೊಂಡಿದ್ದೇವೆ.

ಶ್ರೀ ಕೆ. ಪ್ರಭಾಕರ್.—ಅಲ್ಲಿ ಎಷ್ಟು ದಿವಸದ ಕಾರ್ಯಕ್ರಮ ಇಟ್ಟುಕೊಂಡಿದ್ದೀರಿ?

ಶ್ರೀ ವಿ. ಎಸ್. ಕೌಜಲಗಿ.—ಅಲ್ಲಿ 21 ದಿವಸದ ಕಾರ್ಯಕ್ರಮ ಇಟ್ಟಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಯುವಕರ ಮೇಲೆ ಉಸ್ತುವಾರಿ ನೋಡಿಕೊಳ್ಳುವುದಕ್ಕೆ ಅಧಿಕಾರಿಗಳನ್ನು ಏನು ಕಳುಹಿಸುತ್ತೀರಿ ಅದರಿಂದ ಏನೂ ತೊಂದರೆಯಾಗುವುದಿಲ್ಲವೇ?

ಶ್ರೀ ವಿ. ಎಸ್. ಕೌಜಲಗಿ.—ಒಂದು ತಂಡಕ್ಕೆ 100 ವಿದ್ಯಾರ್ಥಿಗಳಂತೆ 80 ಕೇಂದ್ರಗಳನ್ನು ಮಾಡಿದ್ದೇವೆ. ಅದರ ಮೇಲ್ವಿಚಾರಣೆಗಾಗಿ ಕೆಲವು ಆಫೀಸರುಗಳನ್ನು ಕಳುಹಿಸಲೇಬೇಕಾಗುತ್ತದೆ. ಆದುದರಿಂದ ಅವೇನೂ ತೊಂದರೆಯಾಗುವುದಿಲ್ಲ.

ಈ ಶಾಖೆಯನ್ನು ನಾವು ಮೈಸೂರು ಡೆವಲಪ್‌ಮೆಂಟ್ ಕೋರ್ಸ್ ಎಂದು ಹೇಳುತ್ತೇವೆ. ಕಾಲೇಜು ವಿದ್ಯಾಭ್ಯಾಸ ಮಾಡತಕ್ಕಂಥ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಏನು ಇದ್ದಾರೋ ಅದರಲ್ಲಿ ಸ್ವಲ್ಪ ಪ್ರಮಾಣದಲ್ಲಿ ಅವರನ್ನು ಆರಿಸಿ ಸಾಮಾಜಿಕ ಜೀವನವನ್ನು ನಡೆಸಲು ಸಮಾಜದಲ್ಲಿ ನಾವು ಪ್ರತಿಯೊಬ್ಬರಿಗೂ ಸಹಾಯ ಮಾಡಬೇಕು ಎನ್ನುವ ದೃಷ್ಟಿಯಿಂದ ಎಲ್ಲಿ ಜನರು ತೊಂದರೆಗೆ ಈಡಾಗಿರುತ್ತಾರೋ ಅಲ್ಲಿಗೆ ಅವರನ್ನು ವಾಲಂಟಿಯರ್ಸ್ ಆಗಿ ಕಳುಹಿಸುತ್ತೇವೆ. ಈ ರೀತಿಯಾಗಿ ಕೆಲವರನ್ನು ಹಾಸ್ಪಿಟಲ್‌ಗೆ, ಕೆಲವರನ್ನು ಸ್ಲಂ ಕ್ಲಿಯರೆನ್ಸ್‌ಗೆ, ಕೆಲವರನ್ನು ಅಗ್ರಿಕಲ್ಚರಲ್ ಫೀಲ್ಡ್‌ಗೆ ಕಳುಹಿಸಿ ಅವರು ಅಲ್ಲಿ ಹೋಗಿ ಸಾಮಾಜಿಕ ಜೀವನದಲ್ಲಿ ನಡೆದುಕೊಳ್ಳುವ ಹಾಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಈಗ ಇರತಕ್ಕಂಥ ಕೃಷಿ ವಿಧಾನದಲ್ಲಿ ದಿನೇ ದಿನೇ ನೀರಾವರಿಗೆ ಉಪಯೋಗಿ ಸುತ್ತಿರುವ ಟ್ರಾಕ್ಟರ್ ರಿಪೇರಿ ಪ್ರಶ್ನೆ ಬರುತ್ತದೆ. ಅವಕ್ಕೂ ಸಹ ನಮ್ಮ ವಿದ್ಯಾರ್ಥಿಗಳು ಹೋಗಿ ಅಲ್ಲಿರುವ ನಮ್ಮ ರೈತರಿಗೆ ಅದನ್ನು ರಿಪೇರಿ ಮಾಡುವುದನ್ನು ತೋರಿಸಿ, ರಿಪೇರಿ ಮಾಡಿಕೊಟ್ಟು ಅವರು ತಮ್ಮ ಕೆಲಸವನ್ನು ನಿರ್ವಹಣೆ ಮಾಡಲು ಅನುಕೂಲವಾಗುವಂಥ ಒಂದು ಸ್ಕೀಮನ್ನು ಹಾಕಿ ಕೊಂಡಿದ್ದಾರೆ. ಇದು ಕಳೆದ ವರ್ಷ 100ಕ್ಕೆ ಮಿತಿಇತ್ತು, ಅದನ್ನು ಈಸಲ ಹೆಚ್ಚು ಮಾಡಿ 200ಕ್ಕೆ ಏರಿಸಿದ್ದೇವೆ.

ಇನ್ನು ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಏನು ಇದ್ದಾರೋ ಅವರು ತಮ್ಮ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನ ಕೊಡುವ ನಿಟ್ಟುವಾಗಿ ಯಾರು ಪರೀಕ್ಷೆಯಲ್ಲಿ ಮೊದಲನೇ ತರಗತಿಯಲ್ಲಿ ಉತ್ತೀರ್ಣರಾಗುತ್ತಾರೋ ಅಂಥಾ ವಿದ್ಯಾರ್ಥಿಗಳನ್ನ ಸತ್ಕಾರ ಮಾಡಿ, ಆ

ಮೆರಿಟೆಡ್ ಸ್ಟೂಡೆಂಟ್ಸ್‌ಗೆ ಒಂದು ಇನ್‌ಸೆಂಟೀವ್ ಅಮೌಂಟನ್ನು ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆ ರೀತಿ ನಮ್ಮ ರಾಜ್ಯದಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ಅಂದಂಥ ವಿದ್ಯಾರ್ಥಿಗಳಿಗೆ 100 ರೂಪಾಯಿ ಇನ್‌ಸೆಂಟೀವ್ ಅಮೌಂಟ್ ಕೊಟ್ಟು ಅವರನ್ನು ಸತ್ಕರಿಸುತ್ತೇವೆ. ಇದರಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚು ವಿದ್ಯಾರ್ಥಿಗಳು ಅನಕ್ಕೆ ವಹಿಸಿ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡುತ್ತಾರೆ ಎನ್ನುವ ಆಶಯದಿಂದ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ.

ಇನ್ನು ನಮ್ಮ ರಾಜ್ಯದಲ್ಲಿ ನೆಹರೂ ಯುವಕ ಕೇಂದ್ರಗಳನ್ನು 6 ಜಿಲ್ಲೆಗಳಲ್ಲಿ ಸ್ಥಾಪಿಸಲಿದೆ. ನೆಹರೂ ಯುವಕ ಕೇಂದ್ರದ ಉದ್ದೇಶವನ್ನು ನಾನು ಈಗಾಗಲೇ ಹೇಳಿದ್ದೇನೆ. This Nehru Yuvak Kendras are intended to serve as a focul point for the youths of the areas where these centres are located. These Kendras will help in starting rural libraries and also provide a forum for exchange of views. ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರು ನೆಹರೂ ಯುವಕ ಕೇಂದ್ರ ಅಂತ ಇರುವುದನ್ನು ನೇತಾಜಿ ಯುವಕ ಕೇಂದ್ರ ಎಂದು ಇಡಬೇಕು ಎಂದು ಹೇಳಿದರು. ಆದುದರಿಂದ ಈ ವಿಷಯದಲ್ಲಿ ಹೇಳುವುದಾದರೆ ಕೇಂದ್ರ ಸರ್ಕಾರದವರು ಮೊದಲೇ ಯೋಚನೆ ಮಾಡಿ ಈ ಹೆಸರು ಇಟ್ಟಿರುವುದರಿಂದ ಕೇಂದ್ರ ಸರ್ಕಾರದವರು ಯಾವ ರೀತಿಯಾಗಿ ನಿರ್ದಿಷ್ಟವಾಗಿ ನಮಗೆ ತಿಳಿಸುತ್ತಾರೋ ಅದೇ ರೀತಿ ನಾವು ನಡೆಸಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗಾಗಲೇ ಇದರ ಬಗ್ಗೆ ತರಳೆ ಪ್ರಾರಂಭವಾಗಿದೆ. ಈಗ ಒಂದು ಕಡೆ ನೆಹರೂ ಫೋರಂ ಅಂತ ಇದೆ, ಇನ್ನೊಂದು ಕಡೆ ಸೋಷಲಿಸ್ಟ್ ಫೋರಂ ಅಂತ ಇದೆ. ಈಗ ಅವರವರಲ್ಲೇ ತರಳೆ ಆಗಿ ಹೋಗಿ ಬಿಟ್ಟಿದೆ. ಆದುದರಿಂದ ಈ ಹೆಸರನ್ನು ಬದಲಾಯಿಸಿದರೆ ಮುಂದೆ ತರಳೆ ಬರುವುದಕ್ಕೆ ಅವಕಾಶವಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಹೇಳಿದ್ದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಈಗ ತಾವು ಇಟ್ಟ ಹೆಸರನ್ನೇ ಎತಕ್ಕೆ ಇಡಬೇಕು? ನೆಹರೂ ಅವರ ಅಜ್ಜಿ, ಅಜ್ಜ, ಅವರ ಕುಟುಂಬದ ಹೆಸರನ್ನೇ ಏತಕ್ಕೇ ಇಡಬೇಕು? ಆದುದರಿಂದ ಇದಕ್ಕೆ ನೇತಾಜಿ ಕೇಂದ್ರ ಅನ್ನುವ ಹೆಸರನ್ನು ಇಡಿ ಎಂದು ಹೇಳುತ್ತೇವೆ.

ಶ್ರೀ ವಿ. ಎಸ್. ಕಾಲೇಜಿಗೆ.—ಇನ್ನು ಮಲ್ಲಯುದ್ಧದ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಈ ಬಗ್ಗೆ ಈಗ ಆಸಕ್ತಿ ಕಡಿಮೆಯಾಗುತ್ತಾ ಬಂದಿದೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಆಸಕ್ತಿ ವಹಿಸಿ ನಮ್ಮ ಯುವಕರನ್ನು ತಯಾರು ಮಾಡಬೇಕು ಎನ್ನುವ ಉದ್ದೇಶದಿಂದ ಇದಕ್ಕೆ ಪ್ರೋತ್ಸಾಹ ಕೊಟ್ಟಿದೆ.

ಇನ್ನು ಶ್ರೀಮಾನ್ ಕೆಚ್. ಡಿ. ದೇವೇಗೌಡರು ವಾಚನಾಲಯದ ಮೇಲೆ ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಾರೆ. ಮೊಟ್ಟಮೊದಲನೆಯದಾಗಿ ಅಲ್ಲಿರತಕ್ಕಂಥ ಸಿಬ್ಬಂದಿಗಳನ್ನು ರೆಗ್ಯುಲರೈಸ್ ಮಾಡುವ ಹಾಗೆ ಹೇಳಿದ್ದಾರೆ. ಈ ಸಲಹೆ ಕಾರ್ಯರೂಪದಲ್ಲಿದೆ. ಅದು ಅದಷ್ಟು ಜಾಗ್ರತೆ ಆಗುತ್ತದೆ ಎಂದು ಹೇಳುತ್ತೇನೆ.

ಇನ್ನು ಬಿ. ಜಿ. ಬಣಕಾರ್ ಅವರು ಒಂದು ಸಲಹೆ ಮಾಡಿದ್ದಾರೆ. ಇದು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಅದರಲ್ಲೂ ಹಳ್ಳಿಗಾಡುಗಳಲ್ಲಿ ಈ ಲೈಬ್ರರಿ ಫೆಸಿಲಿಟೀಸ್ ಸೌಲಭ್ಯ ಆಗಬೇಕು ಎಂದು ಹೇಳಿದರು. ಈ ಬಗ್ಗೆ ಹೇಳುವುದಾದರೆ ಇನ್ನು ಕೆಲವೇ ದಿವಸಗಳಲ್ಲಿ ರಾಜ್ಯದ ಪ್ರತಿಯೊಂದು ಗ್ರಾಮಕ್ಕೂ ಲೈಬ್ರರಿ ಕಾರ್ಯಾಲಯದ ಸೌಲಭ್ಯ ಸಿಕ್ಕುತ್ತದೆ ಎಂದು ಹೇಳುತ್ತೇನೆ. ಅದೂ ಅಲ್ಲದೆ ಇದು ಒಂದು ಕೇಂದ್ರ ಸರ್ಕಾರದ ಯೋಜನೆ. ಇದು ರಾಷ್ಟ್ರದ ಯಾವ ಸ್ಟೇಟಿಗೂ ಕೊಡದೆ ನಮ್ಮ ರಾಜ್ಯಕ್ಕೆ ಕೊಟ್ಟಿರತಕ್ಕಂಥ ಯೋಜನೆ. ೫ಸಾವಿರ ಜನಸಂಖ್ಯೆಯಿಂದ ಹಿಡಿದು 10ಸಾವಿರ ಜನಸಂಖ್ಯೆಯವರೆಗೂ ಇರತಕ್ಕಂಥ ಪ್ರತಿಯೊಂದು ಗ್ರಾಮಕ್ಕೂ ವಾಚನಾಲಯ ಮಾಡುವುದಕ್ಕೋಸ್ಕರ ಪುಸ್ತಕಗಳನ್ನು ಕೊಟ್ಟಿದ್ದಾರೆ. ನಮಗೆ ಈಗಾಗಲೇ ಕೇಂದ್ರ ಸರ್ಕಾರದಿಂದ ಸಾಕಷ್ಟು ಪುಸ್ತಕಗಳು ಬರುತ್ತಾ ಇವೆ. ಇದನ್ನು ಸಾಧ್ಯವಾದಷ್ಟು ಬೇಗ ಕಾರ್ಯರೂಪದಲ್ಲಿ ಜಾರಿಗೆ ತರುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ, ಈಗ ತಾವು ಹೇಳಿದುದೆಲ್ಲಾ ಯುವಕರ ಕಲ್ಯಾಣಕ್ಕೆ ಆಯಿತು. ಆದರೆ ಸಮಾಜ ಕಲ್ಯಾಣ ಆಗಬೇಕಾದರೆ ಯುವತಿಯರು ಅಂದರೆ ಹೆಣ್ಣುಮಕ್ಕಳ ಪ್ರಗತಿ ರಾಜ್ಯದಲ್ಲಿ ಅವಶ್ಯಕ ಇದೆ. ಅವರು ರಾಷ್ಟ್ರ ಕಟ್ಟತಕ್ಕಂಥ ತಾಯಂದಿರು. ಈ ಹೆಣ್ಣು ಮಕ್ಕಳ ಕಲ್ಯಾಣದ ಬಗ್ಗೆ ಒಂದು ಲವಲೇಶವೂ ಕಾರ್ಯಕ್ರಮವೂ ಇಲ್ಲ. ಈ ರೀತಿ ಆದರೆ ನಿಮ್ಮ ಯೋಜನೆಗಳು ಫೈಲ್ಯೂರ್ ಆಗುತ್ತವೆ. ಆದುದರಿಂದ ಈ ಹೆಣ್ಣುಮಕ್ಕಳ ಕ್ಷೇಮಾಭಿವೃದ್ಧಿಗೆ ರಾಜ್ಯ ಸರ್ಕಾರದ ನಿಲುವು ಏನು?

ಶ್ರೀ ವಿ. ಎಸ್. ಕೌಜಲಗಿ.—ಮೊದಲು ಈ ಯುವಕರ ಕಾರ್ಯಕ್ರಮ ಏನು ಇದೆಯೋ ಇದು ಒಂದು ಪ್ರಗತಿಪಥದಲ್ಲಿ ನಡೆಯುವಂತಾದಮೇಲೆ ಅನಂತರ ಯುವತಿಯರಿಗೆ ಒಂದು ಕಾರ್ಯಕ್ರಮವನ್ನು ಹಾಕಿ ಅವರನ್ನು ಉತ್ತಮ ತಾಯಂದಿರನ್ನಾಗಿ ಮಾಡಲು ಅವಕಾಶ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ವಿದ್ಯಾರ್ಥಿಗಳ ಪಾತ್ರವೇನು, ಇದರಲ್ಲಿ ಹೇಳಿಲ್ಲ.

ಶ್ರೀ ವಿ. ಎಸ್. ಕೌಜಲಗಿ.—ಆ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ತಪ್ಪು ಲಕ್ಷ್ಯ ಇಟ್ಟು ಕೇಳಲಿಲ್ಲಾ. ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ಅವರು ಅದರಲ್ಲಿ ಭಾಗವಹಿಸುವಂತೆ ಮಾಡಬೇಕು ಎನ್ನುವ ವಿಚಾರವನ್ನು ಮೊದಲೇ ಹೇಳಿದ್ದೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—I now put the demands to the vote of the House. The question is :

"That a sum not exce ding Rs.67 01,40,000 inclusive of the sum granted 'on account' be granted to the Government to defary the charges which will come in course of payment during the financial year ending 31st day of March 1974, in respect of demand No. 17 'Education (Excluding Youth Services)'."

"That a sum not exceeding Rs. 1,98,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of demands No. 37 'Stationery and Printing'."

"That a sum not exceeding Rs. 60.01,000 inclusive of the sum granted 'on account' be granted to the Government to defary the charges which will come in course of payment during the financial year ending 31st day of March 1974, in respect of demand No. 17 A, 'Youth Services'."

The motion was adopted and Demands were voted

Non Official Resolution

re ; Appointment of a High Power Commission to go into Causes etc, of fall in Standard of Students

† ಟಿ. ಆರ್. ಶಾಮಣ್ಣ (ಕೋಚೆ).—ಅಧ್ಯಕ್ಷರೇ, ಸಭೆಯ ಮುಂದೆ ನಾನು ಮುಂಡಿಸಿರತಕ್ಕ ನಿರ್ಣಯ ಹೀಗಿದೆ:—

"ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟವು ಅಪಗತಿ ಹೊಂದುತ್ತಿರುವ ಬಗ್ಗೆ ಕಾರಣಗಳನ್ನು ಪರಿಶೀಲಿಸಿ ಅದನ್ನು ಉತ್ತಮ ಪಡಿಸಲು ಮಾರ್ಗೋಪಾಯಗಳನ್ನು ಸೂಚಿಸಲು ಉನ್ನತ ಅಧಿಕಾರವುಳ್ಳ ಸಮಿತಿಯೊಂದನ್ನು ನೇಮಿಸಬೇಕೆಂದು ಈ ಸಭೆಯವರು ಸರ್ಕಾರದವರಿಗೆ ಸಿಫಾರಸ್ಸು ಮಾಡುತ್ತಾರೆ."

ಇದರ ಬಗ್ಗೆ ನಿನ್ನೆ ಮತ್ತು ಮೊನ್ನೆ ಸಾಕಾದಷ್ಟು ವಿವರಗಳು ಚರ್ಚೆಯಾಗಿವೆ. ಈಗ ಈ ರಾಜ್ಯದಲ್ಲಿ ಹಾಗೂ ಇಡೀ ದೇಶದಲ್ಲಿ ವಿದ್ಯಾಭ್ಯಾಸದ ಮಟ್ಟ ದಿನೇ ದಿನೇ ಕಡಿಮೆಯಾಗುತ್ತಿದೆ; ಇದರಿಂದ ದೇಶದ ಉನ್ನತಿಗೆ ಬಹಳ ಧಕ್ಕೆ ಬರುತ್ತಿದೆ ಎನ್ನುವುದರ ಬಗ್ಗೆ ಸಾಕಾದಷ್ಟು ಚರ್ಚೆ ನಡೆಯುತ್ತಿದೆ. ನಾನು ಈ ಸಂದರ್ಭದಲ್ಲಿ ಶೈಕ್ಷಣಿಕ ಮಟ್ಟ ಎಂದು ಹೇಳುವುದರಲ್ಲಿ ಬರೀ ವಿದ್ಯಾಭ್ಯಾಸದ ಬಗ್ಗೆ ಹೇಳುವುದಿಲ್ಲ. ವಿದ್ಯಾರ್ಥಿಗಳ ವಿದ್ಯಾಭ್ಯಾಸ ಮತ್ತು ಅವರ ನೈತಿಕ ಮಟ್ಟ ದೇಹಾರ್ಢ್ಯದ